ಪಂಚಮ

ಸಂಪುಟ : 5 ಸಂಚಿಕೆ : 10, 11 ಬೆಲೆ : 50 ಪೈಸೆ ಜುಲೈ 1981

ದ. ಸಂ. ಸ. ನಿಯೋಗ

ಏಪ್ರಿಲ್ ಬೇಸಿಗೆಯಲ್ಲಿ ಜಾತಿ ಜ್ವಾಲೆಯೂ ಸೇರಿ ಬೆಂದ ನಾರಾಯಣಪುರ ಬಾಲ್ಕಿ ಬೀದರ್ ಜಿಲ್ಲೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ತನ್ನ ನಿಯೋಗವೊಂದನ್ನು ಕಳಿಸಿತ್ತು. ಇದುವರೆಗೂ ಈ ಗಲಾಟೆಯು ಬಹಿರಂಗ ಮಾತ್ರ ತಿಳಿದಿದ್ದ ನಮಗೆ, ಈ ನಿಯೋಗದ ವರದಿಯಿಂದ ಅಂತರಂಗದಲ್ಲಾದ ಅನೇಕ ಕುತೂಹಲಕರ ಕ್ರೂರ ಘಟನೆಗಳು ಬೆಚ್ಚಿ ಬೀಳಿಸುತ್ತವೆ. ಅದನ್ನು ಇಲ್ಲಿ ಕೊಟ್ಟಿದ್ದೇವೆ.

ಬಾಲ್ಕಿ ನಾರಯಣಪುರ ಜಾತಿ ಬೆಂಕಿ : ಒಳನೋಟ

ಖರ್ಗೆಗೆ ಕಾಲಿಡಗೊಡಲಿಲ್ಲ !

ಬಾಲ್ಕಿ ಹತ್ತಿ ಉರಿಯುತ್ತಿದ್ದಾಗ ಕಂದಾಯ ಸಚಿವ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಬಾಲ್ಕಿಗೆ ಹೋಗಲು ಏಪ್ರಿಲ್ 22ರಂದು ಬೀದರ್‌ಗೆ ಬಂದರು. ಇದನ್ನು ತಿಳಿದ ಖಂಡ್ರೆಯು ಬೀದರ್ ಎಸ್. ಪಿ. ಗೆ ಫೋನ್ ಮಾಡಿ "ಖರ್ಗೆ ಇಲ್ಲಿಗೆ ಕಾಲಿಟ್ಟರೆ ಪರಿಸ್ಥಿತಿ ಹದಗೆಡುತ್ತದೆ. ಲಿಂಗಾಯಿತರು ಟೆನ್ಸನ್‌ನಲ್ಲಿ ಇದ್ದಾರೆ. ಮುಂದಿನ ಅನಾಹುತಕ್ಕೆ ನಾನು ಜವಾಬ್ದಾರನಲ್ಲ" ಎಂದು ಬೆದರಿಸಿ, ಖರ್ಗೆ ಬಾಲ್ಕಿಗೆ ಕಾಲಿಡದಂತೆ ಮಾಡಿದರು. ಪಟ್ಟು ಬಿಡದ ಖರ್ಗೆ ಒಂದು ವಾರದ ಮೇಲೆ ಬಾಲ್ಕಿ ಬಂದು ನೊಂದು ಬೆಂದ ಜನರನ್ನ ಕಂಡರು.

ಬಂದರೆ ಖಂಡ್ರೆ ಹೆಣ ಬರಲಿ

ಜಾತಿ ವಿಷ ಜ್ವಾಲೆಗೆ ಸಿಕ್ಕಿ ಹೆಣವೂ ಸಿಗದಂತೆ ಬೆಂದು ಉರಿಯಾದ ದಲಿತ ನಾಯಕ ಕುಂದೆಯ ಸಾವಿಗೆ ಖಂಡ್ರೆಯೇ ಕಾರಣ ಎಂದು ಬೀದರ್‌ನ ಒಂದು ಮಗುವೂ ಹೇಳುತ್ತದೆ. ಬೆಂದ ಕುಂದೆಯ ಮೂಳೆ, ಬೂದಿಗೆ ಸಂಸ್ಕಾರ ಮಾಡುವಾಗ ಅಂತಿಮ ಸಂಸ್ಕಾರಕ್ಕೆ ಖಂಡ್ರೆಯು ಬರುವ ಸೂಚನೆ ಕಂಡಾಗ ಕುಂದೆಯ ಮಗ ಆ ದುಃಖದಲ್ಲೂ ಕುಪಿತರಾಗಿ 'ಬಂದರೆ ಖಂಡ್ರೆ ಹೆಣ ಬಂದು ನನ್ನ ಅಪ್ಪನ ಮೂಳೆ ದೇಹದ ಬೂದಿಯೊಡನೆ ಒಂದಾಗಲಿ' ಎಂದ ಮಾತು ಈಗ ಮನೆ ಮಾತಾಗಿದೆ.

ಬೀದರ್ ಜಿಲ್ಲೆಯ ದಲಿತರು ಮತ್ತು ಸವರ್ಣೀಯರ ನಡುವೆ ಈಗಲೂ ಒಳಗೊಳಗೆ ಕುದಿಯುತ್ತಿರುವ ಜಾತಿ ವೈಷಮ್ಯದ ಕಟ್ಟೆ ಒಡೆಯದಂತೆ ತಡೆಯುತ್ತ ಪೋಲಿಸ್‌ವ್ಯಾನ್‌ಗಳು ನಿಂತಿವೆ. ಊರುಗಳಲ್ಲಿ ಸ್ಮಶಾನಮೌನ ಪರಸ್ಪರ ಅಪನಂಬಿಕೆ, ಅಸಹಕಾರ ಮುಂದುವರಿದಿದೆ. ದಲಿತರ ಕೇರಿಗಳಾದ ಭೀಮನಗರ, ಅಶೋಕನಗರಗಳಲ್ಲಿ ನೋವು ಯಾತನೆ ನರಳುತ್ತಿದೆ.

ಗುಂಪು ಘರ್ಷಣೆಯಲ್ಲಾದ ಸವರ್ಣೀಯನ ಸಾವಿಗೆ ಪ್ರತಿಕಾರವಾಗಿ ದಲಿತ ನಾಯಕ ತುಕರಾಂ ಕುಂದೆಯನ್ನು ಸೂರ್ಯನೆದುರೇ ಜೀವಂತ ಸುಟ್ಟ ಬಾಲ್ಕಿ ಸವರ್ಣೀಯರು, ಇನ್ನಷ್ಟು ದಲಿತರ ಜೀವಬಲಿಗೆ ಕಾಯುತ್ತಿದ್ದಾರೆ. ಈ ಹಿಂದೆ ಬೀದರ್‌ನಲ್ಲಿ ದಲಿತ ವಿವಾಹಿತ ಮಹಿಳೆಯನ್ನು ಲಿಂಗಾಯಿತ ಪ್ರೇಮಿಗೆ ಬಲತ್ಕಾರ ಮದುವೆ ಮಾಡಿಸಿದ್ದು, ಹಾಗೇ ಕುರುಬ ಜಾತಿಯ ಯುವಕನ ಪ್ರೇಮಿ ಲಿಂಗಾಯಿತ ಹುಡುಗಿಯನ್ನು ಅಪಹರಿಸಲು ದಲಿತರು ಸಹಕರಿಸಿದ್ದನ್ನೆಲ್ಲ ಈಗ ಜಾತಸ್ಥ ಸವರ್ಣೀಯರು ತೀರಿಸಿಕೊಳ್ಳುತ್ತಿದ್ದಾರೆ. ಉದಾರವಾದಿ ಸವರ್ಣೀಯರ ಅಭಿಪ್ರಾಯದಂತೆ ಬೀದರ್ ಬೆಂಕಿಗೆ ನಾರಾಯಣಪುರದ ಮಲ್ಲರೆಡ್ಡಿ, ಶಾಸಕ ಖಂಡ್ರೆ, ಅಸ್ಟೂರೆ ಹಾಗೂ ಆರ್.ಎಸ್.ಎಸ್ ಕಾರಣ. ಖಂಡ್ರೆಯು ಮೀಸಲಾತಿ ವಿರೋಧಿ ಚಳವಳಿ ಆರಂಭಿಸುವ ಮೊದಲ ಹೆಜ್ಜೆಯಾಗಿ ಈ ಸಲ ಆಚರಿಸುವ ಅಂಬೇಡ್ಕರ್ ಜಯಂತಿಗಳಿಗೆ ತಡೆಯೊಡ್ಡಿ ಗಲಭೆ ಉಂಟುಮಾಡಬೇಕೆಂದು ಜಿಲ್ಲೆಯ ಸರಪಂಚರಿಗೆಲ್ಲ ಸೂಚಿಸಿದ್ದ ಪರಿಣಾಮವಾಗೇ ನಾರಾಯಣಪುರದ ಅಂಬೆಡ್ಕರ್ ಮೆರವಣಿಗೆಗೆ ಅಡ್ಡಿಯಾಗಿ ಗಲಭೆ ಉಂಟಾಯಿತೆನ್ನಲಾಗಿದೆ.

ನಾರಾಯಣಪುರ ಗೋಲಿಬಾರ್ ಪ್ರತಿಭಟಿಸಿ ಏಪ್ರಿಲ್ ೧೭ರಂದು ಬಸವಕಲ್ಯಾಣಬಂದ್ ನಡೆಯಿತು. ಈ ಬೆಂಕಿ ಹಿಡಿದು ನಾರಾಯಣಪುರದ ಸರಪಂಚ ಮಲ್ಲರೆಡ್ಡಿ ಮತ್ತಿತರರು ಬಾಲ್ಕಿಗೆ ಬಂದು, ಖಂಡ್ರೆ ಇಲ್ಲದಿರಲು ಮಾಜಿ ಸಚಿವ ಸುಭಾಷ್ ಅಸ್ಟೂರೆ ಮನೆಯಲ್ಲಿ ಸಂಚು ರೂಪಿತವಾಗಿ ಹರಡಿತು. ಆ ಮೇಲೆ ಪುಂಡಾಡಿಕೆಗೆ ಹೇಳಿ ಮಾಡಿಸಿದ ಪುರಸಭಾ ಅದ್ಯಕ್ಷ ಸಿದ್ರಾಮಪ್ಪ ವಂಕೆ, ಆರ್.

ಮೂರನೆ ಪುಟಕ್ಕೆ

ರತ್ನಪುರಿ ಅನಾಹುತಕ್ಕೆ ಪೋಲೀಸ್ ಷಾಮೀಲು: ದಲಿತರು ದಿಕ್ಕಪಾಲು

ಹುಣಸೂರು ಪೋಲಿಸರ ಅಸಡ್ಡೆ ಉಡಾಫೆಯಿಂದಾಗಿ ರತ್ನಪುರಿಯಲ್ಲಿ ಜೂನ್ 29ರಂದು ಒಬ್ಬನು ಜೀವ ಕಳೆದುಕೊಳ್ಳಬೇಕಾಯಿತು. ಇನ್ನೊಬ್ಬನು ತೋಳು ಕಳೆದುಕೊಳ್ಳಬೇಕಾಯಿತು. ಇದರೊಡನೆ ಹಾಲಿನ ಡೈರಿ ಚಿಂದಿಯಾಯಿತು. ಮೂರ್‍ನಾಲ್ಕು ಮನೆಗಳೂ ಎತ್ತಿನ ಗಾಡಿಗಳೂ ಬೆಂದು ಉರಿಯಾದವು. ಈಗ ಊರಿನ ಎಲ್ಲಾ ಜಾತಿಯವರೂ ಅಭಿಪ್ರಾಯಪಡುವಂತೆ ಪೋಲಿಸರು ಸ್ವಲ್ಪವೆ ಎಚ್ಚರಿಕೆ ವಹಿಸಿದ್ದಲ್ಲಿ ಮೇಲಿನ ಅನಾಹುತವನ್ನು ತಪ್ಪಿಸಬಹುದಿತ್ತು. ಇನ್ನೂ ಕೆಲವರು ಕಿವಿಯಲ್ಲಿ ಪಿಸುಗುಟ್ಟು

(ನಾಲ್ಕನೆ ಪುಟಕ್ಕೆ)

ಪಂಚಮ

ಸಂಪಾದಕ:
ರಾಮುದೇವ ರಾಕೆ

ಪ್ರಕಾಶಕ:
ಎಚ್. ಗೋವಿಂದಯ್ಯ

ವ್ಯವಸ್ಥಾಪಕ:
ದೇವಯ್ಯ ಹರವೆ

ಸಂಪಾದಕ ಮಂಡಲಿ:
ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಇಂದೂಧರ ಹೊನ್ನಾಪುರ. ಜೋಳವಾರು ಮಹಮುದ್ ಕುಂಞ, ಶ್ರೀಧರ ಕಲಿವೀರ ಶಿವಾಜಿ ಗಣೇಶನ್, ಜಂಬಣ್ಣ ಅಮರ ಚಿಂತ ಕೆ.ಬಿ. ಸಿದ್ದಯ್ಯ, ಕೆ. ರಾಮಯ್ಯ, ರಂಜಾನ್ ದರ್ಗಾ, ಗುರುರಾಜ ಬೀಡಿಕರ್.

ಚಂದಾವಿವರ:
ವಾರ್ಷಿಕ ಚಂದಾ : 10ರೂ.
ಅಜೀವ ಚಂದಾ : 200ರೂ,

ವಿಳಾಸ:
ಮಾಸ್ತಿಗುಡಿ, 2ನೇಕ್ರಾಸ್
ಅಶೋಕಪುರಂ
ಮೈಸೂರು-570 008

ನಮ್ಮ ಮಾತು

ಇಬ್ಬಂದಿ ಇಂದಿರಾ

ಪಂಚಮ ಮೀಸಲಾತಿಸಂಚಿಕೆಗೆ ನಮ್ಮ ನಿರೀಕ್ಷೆಗೂ ಮೀರಿ ಸುಮಾರು ಮೂನ್ನೂರಕ್ಕೂ ಹೆಚ್ಚಾಗಿ ಪ್ರಶಂಸೆಯ ಪತ್ರಗಳು ಬಂದು ನಾವೇ ಆಶ್ಚರ್ಯಗೊಳ್ಳುವಂತಾಗಿದೆ. ನಮ್ಮ ಹೊಣೆ ಹೆಚ್ಚಿದಂತಾಗಿದೆ. ಮೀಸಲಾತಿ ಸಂಚಿಕೆಯಲ್ಲಿ ಬರೆಯಬೇಕಿದ್ದ ಮುಖ್ಯ ವಿಚಾರ ಒಂದನ್ನು ನಿಮ್ಮ ಗಮನಕ್ಕೆ ಈಗತರುತ್ತಿದ್ದೇವೆ.

ಮೀಸಲಾತಿ ಗಲಭೆಯಲ್ಲಿ ಗುಜರಾತ್‌ನಾದ್ಯಂತ ದಲಿತರು ಸವರ್ಣೀಯರ ದಾಳಿಗೊಳಗಾಗಿ ಪ್ರಾಣಪಕ್ಷಿ ಕಳೆದುಕೊಳ್ಳುತ್ತಿದ್ದಾಗ ಈ ದೇಶದ ಪ್ರಧಾನಿ ಇಂದಿರಾಗೆ ಒಂದು ಖಚಿತ ನಿಲುವು ಇಲ್ಲದೆ ಮೀಸಲಾತಿ ಬಗ್ಗೆ ಸಮಯಕ್ಕನುಗುಣವಾಗಿ ತೊಟ್ಟಿಲು ತೂಗುತ್ತ ಮಗುವನ್ನೂ ಚಿವುಟುತ್ತ ಇಬ್ಬಂದಿ ಆಟವಾಡಿದರು.

ಮಾರ್ಚ್ ೧೮ರಂದು ಇಡೀ ಲೋಕಸಭೆ ಮೀಸಲಾತಿ ಮುಂದುವರಿಕೆಗೆ ಬೆಂಬಲಿಸಿದಾಗ, ಮಾತಾಡಿದ ಇಂದಿರಾ–ಚಾರಿತ್ರಿಕವಾಗಿ ಅನ್ಯಾಯಕ್ಕೊಳಗಾದ ಹರಿಜನರು ಆದಿವಾಸಿಗಳು ಮತ್ತು ಇತರ ಹಿಂದುಳಿದವರು ಆರ್ಥಿಕ ಪ್ರಗತಿ ಸಾಧಿಸುವವರೆಗೂ ಮೀಸಲಾತಿ ಇರಬೇಕೆಂದು ಚಪ್ಪಾಳೆ ತಟ್ಟಿಸಿಕೊಂಡು ಒಂದೇವಾರದಲ್ಲಿ ಮಾತು ಬದಲಿಸಿದರು. ಅಂದರೆ ಮಾರ್ಚ್ ೨೬ರಂದು ಗುಜರಾತ್‌ನ ಮೀಸಲಾತಿ ವಿರೋಧಿ ಚಳವಳಿಗಾರರಿಗೆ 'ಮೀಸಲಾತಿ ನೀಡಿಕೆ, ಮುಂದುವರಿಕೆ ಬಗ್ಗೆ ಪುನರ್ ಪರಿಶೀಲಿಸಲು ರಾಷ್ಟ್ರೀಯ ಆಯೋಗವೊಂದನ್ನು ರಚಿಸಬೇಕೆಂಬ ಸಲಹೆ ಬಗ್ಗೆ ವಿರೋಧ ಪಕ್ಷಗಳೊಡನೆ ಚರ್ಚಿಸುವುದಾಗಿ' ಹೇಳಿ ಆ ಚಳವಳಿಗಾರರ ಬೆನ್ನು ತಟ್ಟಿ ಕಳಿಸಿದರು.

ಮಾರ್ಚ್ ೨೯ರಂದು ಒರಿಸ್ಸಾದಲ್ಲಿದ್ದ ಇಂದಿರಾ ಪತ್ರಕರ್ತರೊಡನೆ ಮಾತಾಡುತ್ತ 'ಮೀಸಲಾತಿ ಮುಂದುವರೆಸಬೇಕೆ ಅಥವಾ ಬೇಡವೆ ಎಂಬುದನ್ನು ಜನರೇ ನಿರ್ಧರಿಸಬೇಕೆಂದು' ಹೇಳಿ ಅಸ್ಪೃಶ್ಯರನ್ನು ನಿರ್ನಾಮ ಮಾಡಲು ಹೊರಟಿದ್ದ ಸವರ್ಣೀಯರಿಗೆ ಉತ್ತೇಜಿಸಿದರು. ಅಲ್ಲೇ ಗುಜರಾತ್ ಚಳವಳಿ ಪ್ರಸ್ತಾಪಿಸಿ 'ಅದು ಆ ರಾಜ್ಯಕ್ಕೆ ಸಂಬಂಧಿಸಿದ ವಿಷಯ, ಆ ರಾಜ್ಯದ ಮುಖ್ಯಮಂತ್ರಿಯೇ ಎದುರಿಸಬೇಕು, ತನಗೆ ಯಾವ ಪರಿಹಾರ ಸೂತ್ರವೂ ಹೊಳೆಯುತ್ತಿಲ್ಲ' ಎಂದು ಇಂದಿರಾ ನುಣಚಿ ಕೊಂಡರು! ಇಂಥ ಬ್ರಾಹ್ಮಣ ನಾಯಿಕೆ ಇಂದಿರಮ್ಮನಿಂದ ಮಾತ್ರ ತಮ್ಮ ಉದ್ಧಾರ ಎಂಬ ಭ್ರಮೆಯಲ್ಲಿರುವ ಮುಗ್ಧ ದಲಿತರು ಆಕೆಯ ಒಳಗಿರುವ ಪಿಶಾಚಿಯನ್ನು ಕಂಡುಕೊಂಡು ಆಕೆಯ ಕರಾಳ ಹಸ್ತದ ಬಲೆಯಿಂದ ಬಿಡುಗಡೆ ಪಡೆಯದಿದ್ದಲ್ಲಿ ದಲಿತರು ತಮ್ಮ ಗೋರಿಯನ್ನು ತಾವೇ ತೋಡಿಕೊಂಡಂತಾಗುವುದು.

ಪತ್ರಗಳು

ಹಾರುವ ನಾಯಕ ಗುಂಡೂ ಕರೆ ಕೇಳಿರೊ!

ಕರ್ನಾಟಕದ ಮುಖ್ಯಮಂತ್ರಿ ಎನ್ನಿಸಿಕೊಂಡ ಗುಂಡೂರಾವ್‌ರು ತೃತೀಯ ಬ್ರಾಹ್ಮಣ ಸಮ್ಮೇಳನ ಉದ್ಘಾಟಿಸಿ ತಮ್ಮ ಜಾತಿ ನಿಷ್ಠೆ ತೋರಿಸಿಕೊಂಡಿದ್ದಾರೆ. ಆಚಾರ ವಿಚಾರಗಳಿಂದ ಬ್ರಾಹ್ಮಣರು ಇಡೀ ಸಮಾಜವನ್ನೆ ಮೇಲು ಕೀಳು ಮಾಡಿ ಮನುಷ್ಯನು ಅವಮಾನಕರವಾಗಿ ಬಾಳುವೆ ಮಾಡುವುದಕ್ಕೆ ಕಾರಣರಾದುದನ್ನು ಈ ಮುಖ್ಯಮಂತ್ರಿ ಉದ್ಘಾಟಿಸುವ ಮೂಲಕ ಆ ಅನ್ಯಾಯ ಸಮರ್ಥಿಸಿ ಕನ್ನಡಿಗರು ತಲೆ ಎತ್ತಿ ನಡೆಯದಂತೆ ಮಾಡಿದ್ದಾರೆ. ಪುರೋಹಿತಶ್ಯ ಬ್ರಾಹ್ಮಣರ ಆ ಜನ್ಮಸಿದ್ಧ ಹಕ್ಕೆಂದು ಹೇಳುವ ಇವರು ಈ ಪುರೋಹಿತಶಾಹಿಯೇ ಇಡೀ ಇಂಡಿಯಾವನ್ನು ಜಾತಿಯ ಅಗ್ನಿಕುಂಡ ಮಾಡಿ ನರಮೇಧ ಮಾಡಿದ್ದನ್ನು ಬ್ರಾಹ್ಮಣರು ಮರೆತರೂ ಇತರರು ಹೇಗೆ ಮರೆತಾರು?

ಬ್ರಾಹ್ಮಣರಲ್ಲಿ ಬುದ್ಧಿವಂತಿಕೆ, ಜ್ಞಾನ, ಸಂಸ್ಕೃತ ಇದೆಯೆನ್ನುವ ಶ್ರೀರಾವ್‌ಗೆ, ಬ್ರಾಹ್ಮಣರಿಗೆ ಅದಿಲ್ಲ ಅನ್ನುವುದಕ್ಕೆ ಅವರೇ ಉದಾಹರಣೆಯಾಗುವುದಿಲ್ಲವೆ? ಜ್ಞಾನವೆಂಬುದು ಜಾತಿಗೆ ಅಂಟುಕೊಂಡಿಲ್ಲ ಎಂಬ ವೈಜ್ಞಾನಿಕ ತಿಳುವಳಿಕೆ ತಿಳಿದುಕೊಳ್ಳಲು ಯಾಕೆ ಬ್ರಾಹ್ಮಣರು ನಿರಾಕರಿಸುವರು? ಅವೇನು ಗುತ್ತಿಗೆಯೇ? ಇನ್ನಾದರೂ ಇವರಲ್ಲಿ ನಿಜವಾದ ಜ್ಞಾನ ಉಂಟಾಗಬಹುದೆಂದು ನಂಬೋಣವೆ?

—ಪದ್ಮಾಕ್ಷಿ ಶಿವಯ್ಯ, ಸಕಲೇಶಪುರ

ತುಂಬಾಚನ್ನಾಗಿದೆತುಂಬಾಚನ್ನಾಗಿದೆತುಂಬಾಚನ್ನಾಗಿದೆತುಂಬಾ

'ಪಂಚಮ' ವಿಶೇಷಾಂಕ ತುಂಬಾ ಚನ್ನಾಗಿ ಬಂದಿದೆ. ನನಗೆ ಮತ್ತೆ ೨೦ ಪ್ರತಿ ಕಳಿಸಿರಿ, ಒಂದಿಷ್ಟು ಚಂದಾದಾರರನ್ನೇ ಮಾಡಿಸಿಬಿಡಬಹುದು.

—ಚಂದ್ರಶೇಖರಪಾಟೀಲ, ಧಾರವಾಡ

ಆಕಸ್ಮಾತ್ತಾಗಿ ಬಾಬಾಸಾಹೇಬರ 'ಪಂಚಮ' ವಿಶೇಷಾಂಕ ನನಗೆ ಸಿಕ್ಕು ಸಂತೋಷವಾಯ್ತು ನಿಮ್ಮ! ಅಲ್ಲ ನಮ್ಮ ಪತ್ರಿಕೆಗೆ ಅಜನ್ಮ ಸದಸ್ಯನಾಗಲು ಇಚ್ಛಿಸಿದ್ದೇನೆ.

—ಬಿ. ವೆಂಕಟಪ್ಪ
ಆನವಟ್ಟಿ, ಶಿವಮೊಗ್ಗ ಜಿಲ್ಲೆ

'ಪಂಚಮ' ವಿಶೇಷ ಸಂಚಿಕೆ ನೋಡಿ ತುಂಬಾ ಆನಂದವಾಯಿತು. ನಮ್ಮ ಹೋರಾಟಕ್ಕೊಂದು ಹೊಸ ಚೈತನ್ಯ ದೊರೆತಂತಾಯ್ತು. ಪಂಚಮ ವಸ್ತು ಇಂಗ್ಲೀಷಿನಲ್ಲಿ ಹೊರತಂದರೆ ನಮ್ಮ ಹೋರಾಟದ ಅರಿವು ಹೊರ ರಾಜ್ಯಗಳಿಗೆ ಪರಿಚಯವಾಗುವುದು.

—ಎಸ್.ಹೆಚ್.ಜಕ್ಕಪ್ಪನವರ್, ಹರಿಹರ

['ಪಂಚಮ' ಪ್ರಶಂಸೆಯ ನೂರಾರು ಪತ್ರಗಳಲ್ಲಿ ಕೆಲವನ್ನು ಮಾತ್ರ ಪ್ರಕಟಿಸಿದ್ದೇವೆ, ಕ್ಷಮಿಸಿ. ಸಂ.]

ಬಾಲ್ಕಿ ಬೆಂಕಿ ಒಳನೋಟ

ಆರ್.ಎಸ್.ಎಸ್‌ನ ಜಗನ್ನಾಥನಾಯಕ, ಬಲರಾಂ ಮಾಸ್ತರರು ಕೂಡಿಕೊಂಡು ವಿದ್ಯಾರ್ಥಿಮುಖಂಡರಾದ ಸೂರ್ಯಕಾಂತ್, ಕೈಲಾಸ ಶಿವರಾಜ್ ಹೊನ್ನ, ಲಕ್ಷ್ಮಣಾ, ಉಮಾಕಾಂತ್, ಅಶೋಕ್ ಮುಂತಾದವರಿಗೆ ಹುರಿದುಂಬಿಸಿ ನೆಲ ಹದಮಾಡಿ ನಾಳೆಗೆ ಕಾದರು.

ಜಗ್ಗದ ಪ್ರತಿಮೆ

ಆ ನಾಳೆ ಬೆಳ್ಳಿಗೆಯೇ ಸವರ್ಣೀಯರ ಗುಂಪು ಆಯುಧಗಳೊಡನೆ ದಲಿತ ವಿದ್ಯಾರ್ಥಿನಿಲಯ ಚನ್ನಬಸವೇಶ್ವರ ಹಾಸ್ಟಲ್‌ಗೆ ಬೆಂಕಿ ಇಟ್ಟಿತು. ಡಿಲ್ಲಿದ್ದ ವಾರ್ಡನ್ ಮತ್ತು ಮೂವರು ವಿದ್ಯಾರ್ಥಿಗಳಿಗೆ ಥಳಿಸಿದರು. ಆಮೇಲೆ ಬುದ್ಧ ಮಂದಿರವನ್ನು ಪೂರ್ಣನಾಶಗೊಳಿಸಿ ಪ್ರೌಢಶಾಲೆಯ ದಲಿತ ವಿದ್ಯಾರ್ಥಿನಿಲಯದ ಮೇಲೆ ದಾಳಿ ನಡೆಸಿದರು. ಅಷ್ಟಕ್ಕೆನಿಲ್ಲದೆ ಸವರ್ಣೀಯರ ಕಣ್ಣು ಕುಕ್ಕುವಂತಿದ್ದ ಪೋಲಿಸ್ ಸ್ಟೇಷನ್ ಪಕ್ಕದಲ್ಲಿದ್ದ ಅಂಬೇಡ್ಕರ್ ಪ್ರತಿಮೆಯನ್ನು ನೆಲಸಮ ಮಾಡಲು ಪಿ. ಡಬ್ಲ್ಯು. ಡಿ ಆಫೀಸ್ ಆಯುಧಗಳಿಂದ ಹೊಡೆದು ಬಡೆದು ಮುಖದಭಾಗವನ್ನು ವಿರೂಪಗೊಳಿಸಿ, ಜಗ್ಗದಿದ್ದ ಪ್ರತಿಮೆಯನ್ನು ಬೀಳಿಸಲು ಹಟತೊಟ್ಟು ಆ ಪ್ರತಿಮೆಗೆ ಟ್ರ್ಯಾಕ್ಟರ್ ಕಟ್ಟಿ ಎಳೆದರೂ, ಪೋಲಿಸರು ಕೂಡಿಕೊಂಡು ಎಳೆದರೂ ಅಂಬೇಡ್ಕರ್ ಈ ಜಾತಸ್ಥರ ದಾಳಿಗೆ ಜಗ್ಗದೆ ನಿಂತರು. ಈ ಅಸಹನೆಗೆ ಸವರ್ಣೀಯರ ಗುಂಪು ಖಾಲಿಯಾಗಿದ್ದ ವಿದ್ಯಾರ್ಥಿನಿಲಯದ ಎಲ್ಲಾ ರೂಮುಗಳ ಬಾಗಿಲು ಹೊಡೆದು ಅಲ್ಲಿದ್ದ ಪುಸ್ತಕ ಬಟ್ಟೆ ತಟ್ಟೆ ಗ್ಲಾಸುಗಳನ್ನೆಲ್ಲ ಚೆಲ್ಲಾಡಿ ಬೆಂಕಿ ಇಟ್ಟಿತು. ಈ ಬೆಂಕಿಯನ್ನು ಆರಿಸುವವರೂ ಗತಿಯಿಲ್ಲದೆ ಹಾಸ್ಟಲ್ ಮೂರುದಿನ ಉರಿಯಿತು.

ಲಿಂಗಾಯಿತರೇ ರಕ್ಷಿಸಿದರು

ಇತ್ತ, ಗಣಪತಿ ಧನೂರಿ, ಮಾರುತಿ ಕಿರಣ್ ನೇತೃತ್ವದ ಸವರ್ಣೀಯರ ಗುಂಪು ದಲಿತ ವರ್ಗದ ಡಾ. ಮನೋಹರ ಗಾಯಕ್‌ವಾಡರ ಮನೆಗೆ ನುಗ್ಗಿ ಅಲ್ಲಿದ್ದ ಅವರ ಬಾಣಂತಿ ಪತ್ನಿ, ತಾಯಿ, ತಂಗಿಯರ ಮೇಲೆ ಹಲ್ಲೆ ನಡೆಸಿದರು. ಈ ಮನೆಯ ಮಾಲಿಕರು ಲಿಂಗಾಯಿತರಾಗಿದ್ದು ಹಲ್ಲೆಕೋರರ ಕಾಲಿಗೆ ಬಿದ್ದು ಈ ಅಸಹಾಯಕರ ಪ್ರಾಣ ಉಳಿಸಿ ರಾತ್ರೋರಾತ್ರಿ ಅವರ ಊರಿಗೆ ಕಳಿಸಿ ಪಾರು ಮಾಡಿದರು.

ಆರ್.ಎಸ್.ಎಸ್ ಕಕ್ಕಸ್ಸು

ಅಂದಿನ ಸಂಜೆಯಲ್ಲಿ ಆರ್.ಎಸ್‌ಎಸ್‌ನ ನಾಯಕರಾದ ಜಗನ್ನಾಥನಾಯಕ್ ಬಲರಾಮ ಮಾಸ್ತರರು ಅನೇಕ ಕಡೆ ಬಹಿರಂಗ ಭಾಷಣ ಮಾಡಿ ಕುಪಿತ ಜನರ ತಲೆಗೆ ಹಿಂದೂ ಕಕ್ಕಸ್ಸು ತುಂಬಿದರು. ಅಂದಿನ ಭಾಷಣಕೇಳಿದ ಸವರ್ಣೀಯರ ಪ್ರಕಾರ ಮೇಲ್ಕಂಡ ಚಡ್ಡಿನಾಯಕರುಗಳು "ದಲಿತರು ಬೌದ್ಧರು ಕ್ರಿಶ್ಚಿಯನ್ನರು, ಮುಸ್ಲಿಮರಾಗಿ ಪವಿತ್ರ ಹಿಂದೂಧರ್ಮ ನಶಿಸುತ್ತಿರುವುದರಿಂದ ಮೀಸಲಾತಿ ಚಳುವಳಿಯನ್ನು ವ್ಯಾಪಕಗೊಳಿಸಿ ಅಸ್ಪೃಶ್ಯರನ್ನು ದಮನ ಮಾಡಬೇಕು" ಮುಂತಾಗಿ ಕೊಚ್ಚಿಟ್ಟರು. ಇದರ ಫಲವಾಗಿ ಮರುದಿನ ಮಧ್ಯಾಹ್ನ ಶಾಂತಿ ಸಭೆ ನಡೆಯಿತಾದರೂ ಆ ರಾತ್ರಿ ಭೀಮನಗರದ ಕೆಲವು ಜೋಪಡಿಗಳಿಗೆ ಬೆಂಕಿಬಿತ್ತು. ಇಡೀ ರಾತ್ರಿ ಆಗಾಗ ಕಲ್ಲು ತೂರಾಟ ನಡೆಸಿದರು. ಎರಂದು ಬೆಳಿಗ್ಗೆ ದಲಿತರ ಸ್ಥಳೀಯ ಮುಖಂಡ ತುಕಾರಾಂ ಕುಂದೆ ಜವಳಿ ಅಂಗಡಿಗೆ ಬೆಂಕಿ ಇಟ್ಟರು. ಮತ್ತೆ ಶಾಂತಿ ಸಭೆ ಮತ್ತೆ ಮತ್ತೆ ದಲಿತರ ಮೇಲೆ ಹಲ್ಲೆಯೂ ನಡೆದವು.

ಶಿವಲಿಂಗಪ್ಪ ಬಲಿ

ಸಹಿಸಲಾಗದಾಗ ದಲಿತರು ೨೧ರಂದು ಬೆಳಿಗ್ಗೆಯೇ ಪೋಲಿಸ್‌ಠಾಣೆಗೆ ಗುಂಪಾಗಿ ಹೋಗಿ ರಕ್ಷಣೆಗೆ ಕೋರಿದರು. ಕೇರಿಗೆ ಗುಂಪು ಹಿಂತಿರುಗುವಾಗ ಠಾಣೆಯ ಬಳಿಯೇ ಇದ್ದ ಸವರ್ಣೀಯ ವಿದ್ಯಾರ್ಥಿ ಮುಖಂಡರಾದ ಶಿವರಾಜ್ ಅಣದೊರೆ ಶಿವರಾಜ್ ಮಾನ್ನಿರೆಗಳು ಗುಂಪಿನತ್ತ ಕಲ್ಲು ತೂರಿದಾಗ ಶಿವಮ್ಮ ಎಂಬಾಕೆಗೆ ಕಲ್ಲು ತಗುಲಿ ರಕ್ತ ಹರಿಯಿತು. ಕುಪಿತ ಗುಂಪು ಶಿವರಾಜ ಅಣದೊರೆಯನ್ನು ಓಡಿಸಿಕೊಂಡು ಹೋಗಿ ಚಾಕುವಿನಲ್ಲಿ ತಿವಿದರು. ದಾರಿಯಲ್ಲಿ ಸಿಕ್ಕ ಬಸವಮಂದಿರಕ್ಕೆ ಬೆಂಕಿ ಇಟ್ಟರು. ಈ ಸುದ್ದಿ ತಿಳಿದಕೂಡಲೇ ಮಚ್ಚು ಕತ್ತಿ ದೊಣ್ಣೆಗಳೊಡನೆ ಸವರ್ಣೀಯರ ದಂಡು ಅಶೋಕನಗರದ ಮೇಲೆ ಕಲ್ಲಿನ ಮಳೆಗರೆದರು. ಪ್ರತಿಯಾಗಿ ಅಸ್ಪೃಶ್ಯರು ಕಲ್ಲು ತೂರಿದರು. ಇದು ನಡೆಯುತ್ತಿದ್ದಾಗ ಡಿವೈ.ಎಸ್.ಪಿ. ನಾಣಯ್ಯ, ಸಬ್‌ಇನ್ಸ್‌ಪೆಕ್ಟರ್ ಬೆನ್ನೂರ್ ಇನ್ನೂ ಒಂದಿಷ್ಟು ನಡೆಯಲಿ ಎಂಬಂತೆ ತಣ್ಣಗೆ ಕುಳಿತಿದ್ದರು. ದಲಿತ ಪ್ಯಾಂಥರ್ ಕಾರ್ಯ ಕರ್ತರು ಓಡಿಬಂದು ರಕ್ಷಣೆಗೆ ಒತ್ತಾಯಿಸಿದಾಗ ಬೆನ್ನೂರ್ 'ನಿಮ್ಮನ್ನು ನೀವೆ ರಕ್ಷಿಸಿಕೊಳ್ಳಬೇಕು' ಎಂದನಂತೆ! ಎಲ್ಲಾ ಮುಗಿಯುವ ಹೊತ್ತಿಗೆ ಪೋಲಿಸ್ ವ್ಯಾನ್ ಅಂತೂ ಬಂತು. ಎರಡೂ ಗುಂಪು ಚದುರುತ್ತಿದ್ದಾಗ ಕಲ್ಲುತೂರಲು ಮುನ್ನುಗ್ಗಿದ ಸವರ್ಣೀಯ ಶಿವಲಿಂಗಪ್ಪಗೆ ತೀವ್ರತರ ಚಾಕೇಟು ಬಿತ್ತು. ಶಿವಲಿಂಗಪ್ಪನನ್ನು ಆಸ್ಪತ್ರೆಗೆ ಸೇರಿಸಿದರೂ ಉಳಿಯಲಿಲ್ಲ.

ಕುಂದೆ ದಹನ

ಸಾವಿನ ಸುದ್ದಿ ಕಾಳ್ಗಿಚ್ಚಿನಂತೆ ಹರಡಿ ಬೀದರ್ ಮುಟ್ಟಿತು. ಬೀದರ್‌ನಲ್ಲಿ ಶಾಂತಿ ಸಭೆಯಲ್ಲಿದ್ದ ಖಂಡ್ರೆಯು, ರಾಮಚಂದ್ರಪ್ಪ, ತುಕರಾಂ ಕುಂದೆಯವರೊಡನೆ ಬಾಲ್ಕಿಗೆ ಬಂದು ಕುಂದೆಯನ್ನು ತಮ್ಮ ಮನೆಯಲ್ಲಿರಿಸಿ ರಾಮಚಂದ್ರಪ್ಪನವರೊಡನೆ ಠಾಣೆಗೆ ಹೋದರು. ದಲಿತ ಕುಂದೆಯು ಖಂಡ್ರೆ ಮನೆಯಲ್ಲಿರುವುದನ್ನು ತಿಳಿದ ಸವರ್ಣೀಯ (ಅಸ್ತ್ರ್ರೆ?) ಗುಂಪು, ಖಂಡ್ರೆ ಮನೆ ಸುತ್ತುವರೆದು ಕಾರಿನ ಡ್ರೈವರ್ ಪಂಡುಗೆ ಬೆದರಿಸಲು ಆತ ಕುಂದೆಯನ್ನು ಹೊರದಬ್ಬಿದ್ದೇ ತಡ, ಹುತ್ತದಿಂದ ಹೊರಬಂದ ಹಾವಿಗೊಡೆಯುವಂತೆ ಕಬ್ಬಿಣದ ಸಲಾಕೆ ದೊಣ್ಣೆಗಳಿಂದ ಏಟು ಬಿದ್ದು ಕುಂದೆ ತಲೆಯಿಂದ ರಕ್ತ ಚಿಮ್ಮಲು ಆಸ್ಪತೆಗೆ ಓಡಿಬಂದು ಹೆರಿಗೆ ವಾರ್ಡಿಗೆ ಬಂದು ಬಚ್ಚಿಟ್ಟುಕೊಂಡರು.

(ಮುಂದಿನ ಪುಟಕ್ಕೆ)

ಖಂಡ್ರೆ ಸುಮ್ಮನೆ ಖುಂಡ್ರಿ

ಬಾಲ್ಕಿಯ ಸ್ಥಳೀಯ ಪೋಲಿಸರನ್ನು ಪುರಸಭಾಧ್ಯಕ್ಷ ಸಿದ್ರಾಮಪ್ಪ ಜೇಬಿಗಿಟ್ಟುಕೊಂಡು ಪೋಲಿಸರೂ ದಲಿತರ ಮೇಲಿನ ಹಲ್ಲೆಗೆ ಪಾಲುದಾರರಾದ ಮೇಲೆ ಪರಿಸ್ಥಿತಿ ಬಿಗಾಡಯಿಸಿ ಬೀದರ್‌ನಿಂದ ರಿಸರ್ವ್ ಪೋಲಿಸ್ ಬಂತು. ಈ ರಿಸರ್ವ್ ಪೋಲಿಸನ್ನು ಜೇಬಿಗಿಟ್ಟುಕೊಳ್ಳಲು ಖಂಡ್ರೆ ಯತ್ನಿಸಿ ಮುಖಭಂಗವಾಯಿತು. ಒಂದು ಸಲ ಸವರ್ಣೀಯರ ಭಾರಿ ಗುಂಪು ಕಲ್ಲು ಎರಚುವುದನ್ನು ಚದುರಿಸಲು ರಿಸರ್ವ್ ಪೋಲಿಸು ಅತ್ತ ಹೋಗುತಿದ್ದಾಗ ವ್ಯಾನಲ್ಲೇ ಇದ್ದ ಖಂಡ್ರೆಯು 'ಇತ್ತ ಹೋಗ್ರಿ, ಭೀಮನಗರದತ್ತ ಎಂದು ಕೈ ತೋರಿಸಿದಾಗ ಖಂಡ್ರೆಯ ವಿಷಯ ತಿಳಿದ ಪೋಲಿಸರು ಆ ಎಂ.ಎಲ್.ಎ. ಗೆ ಕೇರು ಮಾಡದೆ ಅಂದ ಮಾತು :'ನೀವು ಸುಮ್ಮನೆ ಕುಂಡ್ರಿ ಎಲ್ಲಿಗೆ ಹೋಗಬೇಕು ಎಂಬುದು ನಮಗೆ ಗೊತ್ತು.'

ಬಾಲ್ಕಿ ಬೆಂಕಿ

ಅಲ್ಲಿದ್ದ ಡಾ. ಗೋದವರಿ ಚಿಕಿತ್ಸೆನೀಡಲು ಅಸಡ್ಡೆ ಮಾಡಿದರು, ಅಷ್ಟೇ ಅಲ್ಲ, ಕೆಲವರ ಪ್ರಕಾರ, ಕುಂದೆಗೆ ಎರಚಲು ಆಸಿಡ್ ನೀಡಿದರು ಎಂಬ ಮಾತಿದೆ. ಅಲ್ಲಿಗೇ ಧಾವಿಸಿ ಬಂದ ಗುಂಪು ಕುಂದೆಯನ್ನು ಹೊರಗೆಳೆದು ತಂದು ದೇಹಕ್ಕೆ ಪೆಟ್ರೋಲ್ ಆಸಿಡ್ ಎರಚಿ ಬೆಂಕಿ ಹಚ್ಚಿತು. ಕಣ್ಣಾರೆಕಂಡ ಸವರ್ಣೀಯ ವಿಚಾರವಂತರು ತಿಳಿಸಿದಂತೆ ಎಡತೊಡೆಗೆ ಹೊತ್ತಿಕೊಂಡ ಬೆಂಕಿಯನ್ನು ಕುಂದೆ ತಮ್ಮ ಕೈಯಲ್ಲಿ ಆರಿಸಿಕೊಳ್ಳುತ್ತಿದ್ದಂತೆ, ಗುಂಪು ಇನ್ನಷ್ಟು ಪೆಟ್ರೋಲ್ ಸುರಿಯಲು ದೇಹವಿಡೀ ದಿಗ್ಗನೆ ಹೊತ್ತಿಕೊಂಡಿತು. ಉರಿಯುತ್ತಿದ್ದ ಬೆಂಕಿಯಲ್ಲಿ ಕುಂದೆಯ ದೇಹ ಕಾಣುತ್ತಿರಲಿಲ್ಲ. ಇದಕ್ಕೆ ತಹಸಿಲ್ದಾರ್, ಇನ್ಸ್‌ಪೆಕ್ಟರ್ ಬೆನ್ನೂರ್ ಸಾಕ್ಷಿಗಳು ಅಥವಾ ಸಾಮೀಲುದಾರರು".

ಊರು ಸುಟ್ಟ ನೇಲೆ

ಬಾಲ್ಕಿ ಇಷ್ಟೆಲ್ಲ ಬೆಂದು ಉರಿದು ಬೂದಿಯಾದ ಮೇಲೆ ಮುಖ್ಯಮಂತ್ರಿ ಗುಂಡೂರಾವ್ ಪ್ರತಿನಿಧಿ ಕೆ.ಎಚ್. ಪಾಟೀಲ್, ಸಚಿವರಾದ ಧರ್ಮಸಿಂಗ್ ಕುಸನೂರ್ ಬಾಲ್ಕಿಗೆ ಬಂದು ಪ್ರವಾಸಿ ಮಂದಿರದಲ್ಲಿ ತಣ್ಣಗೆ ಕೂತು ವಿಚಾರಿಸಿ, ಒಮ್ಮೆ ಸವರ್ಣೀಯರ ಕೇರಿಗೆ ಹೋಗಿ ತಲೆ ಸವರಿ, ಜೋಪಡಿಗಳಲ್ಲಿ ಜೀವ ಹಿಡಿದು ಕೂತಿದ್ದ ದಲಿತರನ್ನು ಕಣ್ಣೆತ್ತಿ ನೋಡದೆ ಮರಳಿದರು.

ಇಂದು, ಬಾಲ್ಕಿ ಬಸವಕಲ್ಯಾಣದ ತಾಲ್ಲೂಕಿನ ಬಹುತೇಕ ಕಡೆ ದಲಿತರಿಗೆ ಆರ್ಥಿಕ ದಿಗ್ಬಂದನ ವಿಧಿಸಿ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ. ಇದರಿಂದ ಕೈಗಳಿಗೆ ಕೆಲಸವಿಲ್ಲದ ಪ್ರಯುಕ್ತ ತಿನ್ನಲು ರೊಟ್ಟಿಸಿಗದ ದಲಿತ ಜನಾಂಗದ ಆಕ್ರಂದನವು ಆಕ್ರಂದನ ಮಾತ್ರವಾಗಿದೆ.

ರತ್ನಪುರಿ : ಪೋಲಿಸರ ಷಾಮೀಲು

ಮೊದಲ ಪುಟದಿಂದ

ವಂತೆ—ವಿಶ್ವಶಾಂತಿ ಶಾಲೆ ಸುಟ್ಟು ಬಿಡಬೇಕೆಂದೂ ರತ್ನಪುರಿ ಅಸ್ಪೃಶ್ಯರನ್ನು ಮಟ್ಟಹಾಕಬೇಕೆಂದು ಆ ಸುತ್ತಲಿನ ಬಲಾಢ್ಯರು ನಡೆಸಿದ ಸಂಚಿಗೆ ಪೋಲಿಸರೂ ಸಾಮೀಲಾಗಿ ಮೇಲಿನ ಘಟನೆ ನಡೆದಿದೆ. ಈ ಮಾತಿಗೆ ಅನುಗುಣವಾಗಿಯೇ ಪೋಲಿಸ್ ಅಧಿಕಾರಿಗಳೂ ನಡದುಕೊಂಡಿದ್ದಾರೆ. ಗಲಾಟೆ ಸಂಭವಿಸುವ ಮೂರು ದಿನಕ್ಕೆ ಮುಂಚಿನಿಂದಲೂ ರತ್ನಪುರಿಯಲ್ಲಿ ಬಿಗಿ ವಾತಾವರಣವಿದೆ ಅಸ್ಪೃಶ್ಯರು ಈ ಬಗ್ಗೆ ಹುಣಸೂರು ಪೋಲಿಸ್ ಅಧಿಕಾರಿಗಳಿಗೆ ಕಂಪ್ಲೇಂಟು ಕೊಟ್ಟಾಗ ಎಸ್ .ಐ. ಗಂಗರಾಜುರವರಿಂದ 'ಊರನ್ನ ಬಿಟ್ಟು ಹೋಗಿ' ಅನ್ನಿಸಿಕೊಂಡು ಬರಬೇಕಾಯಿತು. ಭಯಸ್ಥರಾದ ಅಸ್ಪೃಶ್ಯರು ಎಸ್. ಪಿ. ರೇವಣಸಿದ್ದಯ್ಯನವರೇ ಮೊದಲಾಗಿ ಮೆಲಾಧಿಕಾರಿಗಳಿಗೆಲ್ಲ ಎರಡು ದಿನಕ್ಕೆ ಮುಂಚಿತವೇ ರಕ್ಷಣೆಗೆ ಮೊರೆಯಿಟ್ಟಿದ್ದರು. ಅಷ್ಟೇ ಅಲ್ಲ, ಅನಾಹುತವಾದ 29ರಂದು ಬಲಾಢ್ಯರ ಓಡಾಟ ಕಂಡು ಬೆದರಿದ ಅಸ್ಪೃಶ್ಯರು ಇಂದು ಏನಾದರೂ ಸಂಭವಿಸಬಹುದೆಂದು ಬೆದರಿ ಜೀವ ಹಿಡಿದು ಹುಣಸೂರಿಗೆ ಬಂದು ಪೋಲಿಸ್‌ಗೆ ತಿಳಿಸಿದಾಗ ಪೋಲಿಸರು ಕಂಪ್ಲೆಂಟ್ ತಂದವರನ್ನು ಒದ್ದು ಲಾಕಪ್ಪಿನಲ್ಲಿಟ್ಟಿದ್ದಾರೆ. ಇದರ ಬದಲಾಗಿ ತಕ್ಷಣ ಪೋಲಿಸ್ ರತ್ನಪುರಿಗೆ ಬಂದಿದ್ದರೆ ಆದ ಅನಾಹುತ ತಪ್ಪಿಸಬಹುದಿತ್ತು. ಎಲ್ಲಾ ಮುಗಿದ ಮೇಲೆ ರತ್ನಪುರಿಗೆ ಬಂದ ಪೋಲಿಸರು, ಒಲ್ಲದ ಮನಸ್ಸಿನಿಂದ ಉರಿಯುತ್ತಿದ್ದ ಮನೆಯ ಬೆಂಕಿ ಆರಿಸಿದರು, ಅಷ್ಟೆ.

ಪೋಲಿಸ್‌ನ ಮೇಲಿನಂಥ ವರ್ತನೆಗೆ ಬಲಾಢ್ಯರು ಸುರಿದಿದ್ದ ಲಂಚ ಎಂಬುದು ಒಂದು ಕಾರಣವಾದರೆ, ಹುಣಸೂರು ಪೋಲಿಸ್ ಅಧಿಕಾರಿಗಳ ಮೇಲೆ ರತ್ನಪುರಿ ಅಸ್ಪೃಶ್ಯರು ದೂರಿತ್ತಿದ್ದ ಕಾರಣ ಈ ಸೇಡೂ ಸೇರಿಕೊಂಡು ಪೋಲಿಸ್ ಕುಮ್ಮಕ್ಕು ಕೊಟ್ಟಿದ್ದಾಗಿ ತಿಳಿದು ಬಂದಿದೆ. ಆದರೆ ಪೋಲಿಸರ ಅಂದಾಜು ಉಲ್ಟವಾಗಿ ಬಲಾಢ್ಯರ ಕಡೆಯವರೆ ಜೀವ ಮತ್ತು ಕೈ ಕಳೆದು ಕೊಳ್ಳುವ ಆಕಸ್ಮಿಕವಾಗಿದೆ. ಗುಂಡೇಟೇ ಒಬ್ಬನ ಬಲಿ ಮತ್ತೊಬ್ಬನ ತೋಳನ್ನು ಆಹುತಿ ತೆಗೆದುಕೊಂಡಿತು ಎಂದು ಎಲ್ಲರೂ ಹೇಳುತ್ತಿದ್ದು. ಕತ್ತಲಲ್ಲಿ ಆ ಗುಂಪೇ ಗುಂಡು ಹಾರಿಸಿತೆಂದು ಈ ಗಂಪೂ, ಈ ಗಂಪೇ ಗುಂಡು ಹಾರಿಸಿತೆಂದು ಆ ಗುಂಪು ಪರಸ್ಪರ ಆರೋಪಿಸುತ್ತಿವೆ.

ಈ ನಡುವೆ, ರತ್ನಪುರಿಯ ಒಂದು ಸಣ್ಣ ಮಗುವಿಗೂ ತಿಳಿದಿರುವ ಸಂಗತಿಯಾದ 'ರತ್ನಪುರಿಯ ಬಲಾಢ್ಯರೇ ಸುಮಾರು ಮುನ್ನೂರು ಜನರ ಗುಂಪು ಕಟ್ಟಿಕೊಂಡು ಅಸ್ಪೃಶ್ಯರ ಕೇರಿಗೆ ನುಗ್ಗಿ ದಾಂಧಲೆ ನಡೆಸಿದಾಗ ಮೇಲಿನ ದುರ್ಘಟನೆ ಸಂಭವಿಸಿತು' ಎಂಬ ನಿಜವನ್ನು ಮುಚ್ಚಿಹಾಕಿ,ಅಸ್ಪೃಶ್ಯರೇ ಬಲಾಢ್ಯರ ಮೇಲೆಬಿದ್ದು ಗಲಾಟೆ ಮಾಡಿ ತಂತಮ್ಮ ಮನೆಗಳಿಗೆ ತಾವೇ ಬೆಂಕಿ ಹಚ್ಚಿಕೊಂಡರು ಎಂಬ ಸುಳ್ಳನ್ನು ಎತ್ತಿಹಿಡಿದು ಆ ಮೂಲಕ ಲಂಚದ ಋಣವನ್ನು ತೀರಿಸಲು ಹುಣಸೂರು ಪೋಲಿಸರು ಯಮಪ್ರಯತ್ನ ಪಡುತ್ತಿರುವರು. ಅಲ್ಲದೆ, ಈಗ ಬಲಾಢ್ಯರು, ಹುಣಸೂರು ಪೋಲಿಸ್ ಅಧಿಕಾರಿಗಳ ಸಲಹೆ ಮೇರೆಗೆಪೋಲಿಸ್‌ಸೂಪರಿಂಟೆಂಡೆಂಟ್ ಶ್ರೀ ರೇವಣ ಸಿದ್ದಯ್ಯನವರನ್ನು ಬುಟ್ಟಿಗೆ ಹಾಕಿಕೊಳ್ಳಲು ಹವಣಿಸುತ್ತಿರುವುದು ಪ್ರಸ್ತುತ ಸುದ್ದಿಯಾಗಿದೆ. ಜೂನ್ ೨೯ರಂದು ರತ್ನಪುರಿಯಲ್ಲಿ ಹೇಗಾಯ್ತು ಎಂದು ಆ ಊರಿನ ಒಂದು ಸಣ್ಣ ಮಗುವಿಗೂ ತಿಳಿದಿರುವ ವಿಚಾರವು ಶ್ರೀ ರೇವಣ ಸಿದ್ದಯ್ಯನವರಿಗೆ ತಿಳಿಯುವುದೊ ತಿಳಿಯುವುದಿಲ್ಲವೊ ಮುಂದೆ ತಿಳಿದು ಬರುವುದು.

ಇಂದು ರತ್ನಪುರಿ ಮೂಕವಾಗಿದೆ. ಅಸ್ಪೃಶ್ಯರ ಕೇರಿಯಲ್ಲಿ ಮುದುಕರು ಮೋಟರು ಮಾತ್ರ ಇನ್ನೇನುಹೋಗುವ ಜೀವ ಇಲ್ಲೇಹೋಗಲಿ ಎಂದು ನಿಶ್ಚಯಿಸಿಕೊಂಡಿರುವಂತೆ ಕುಂತಿರುವರು. ಮಕ್ಕಳು ಹೆಂಗಸರು ಪ್ರಾಯದವರು ಪ್ರಾಣದ ಮೇಲಿನ ಆಶೆಗಾಗಿ ಪೋಲಿಸ್ ಮೇಲಿನ ಅಪನಂಬಿಕೆಯಿಂದಾಗಿ ಊರು ಬಿಟ್ಟಿರುವರು. ವಿಶ್ವಶಾಂತಿ ಸಂಸ್ಥೆ ಶಾಲೆಯ ದಿಕ್ಕುದೆಸೆ ಇಲ್ಲದ ಎಲ್ಲಾ ಜಾತಿ ಬಡವರನೂರಾರು ಪುಟ್ಟಮಕ್ಕಳು ದಿಕ್ಕಾಪಾಲಾಗಿ ತಮ್ಮ ಪುಟ್ಟಪುಟ್ಟ ಪ್ರಾಣಗಳನ್ನು ಉಳಿಸಿಕೊಳ್ಳಲು ಊರೂರು ಅಲೆಯುತ್ತಿರುವರು.

ಈ ಘಟನೆಯ ಹಿನ್ನಲೆಯಲ್ಲಿರುವ—ಮಾಜಿ ಮುಖ್ಯಮಂತ್ರಿ ಅರಸರೂ ಕೈಯಾಡಿಸಿರುವ ಉದ್ಧಾರ್ ಕಾವಲ್ ಸೊಸೈಟಿಯಂಥ ಅನ್ಯಾಯಗಳನ್ನೂ ಪೋಲಿಸ್‌ನ ಲಂಚ ರುಷುವತ್ತು ಸಾಮೀಲಿನ ಬಗ್ಗೆಲ್ಲ ಸಮಗ್ರ ತನಿಖೆಯಾದಲ್ಲಿ ಹಾಗೂ ಹಾಲಿ ಪೋಲಿಸ್ ಅಧಿಕಾರಿಗಳಿಗೆ ಶಿಕ್ಷೆಯಾಗಿ ನಿಷ್ಪಕ್ಷಪಾತ ಪೋಲಿಸ್ ನೇತೃತ್ವದಲ್ಲಿ ಬಂದೋಬಸ್ತು ಮಾಡಿದರೆ ಮಾತ್ರ ಮುಂದಾಗಬಹುದಾದ ಅನಾಹುತಗಳನ್ನು ತಪ್ಪಿಸಬಹುದು.

ಬೀದರ್‌ನಲ್ಲಿ ಶಾಂತಿ ಸಭೆಯೋ…………

ಭಾಲ್ಕಿಯಲ್ಲಿ ೧೮ರಂದು ಗಲಭೆ ಆರಂಭಗೊಂಡ ನಂತರ ಭಾಲ್ಕಿಯಲ್ಲೂ ಮತ್ತು ಜಿಲ್ಲಾ ಪ್ರಮುಖ ಕೇಂದ್ರವಾದ ಬೀದರ್‌ನಲ್ಲಿ ಎರಡೆರಡು ಬಾರಿ ಶಾಂತಿ ಸಭೆಗಳು ನಡೆದವು. ಅಧಿಕೃತವಾಗಿ ಇಂತಿಷ್ಟು ಸದಸ್ಯರೆಂದು ಸಮಿತಿಯೊಂದನ್ನು ರಚಿಸದೆ 'ಶಾಂತಿ ಸಭೆ' ಹೆಸರಿನಲ್ಲಿ ಬಂದವರನ್ನೆಲ್ಲ ಸೇರಿಸಿಕೊಂಡು ಪರಸ್ಪರ ನಿಂದನೆ ನಡೆಯಿತು. ಅಲ್ಲಿ ಜಿಲ್ಲಾಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಮತ್ತು ತಹಸಿಲ್ದಾರ್ ಅಸಹಾಯಕರಾಗಿದ್ದರು.

೧೯ರಂದು ಜಿಲ್ಲಾಧಿಕಾರಿ ಮತ್ತು ಡಿ.ಐ.ಜಿ. ಸಮ್ಮುಖದಲ್ಲಿ ಭಾಲ್ಕಿಯಲ್ಲಿ ಶಾಂತಿ ಸಭೆಯೊಂದನ್ನು ಕರೆಯಲಾಗಿತ್ತು. ಆ ಸಭೆಗೆ ದಲಿತರ ಪರವಾಗಿ ತುಕರಾಂ ಕುಂದೆ, ಜಯರಾಜ್ ಚತುರೆ, ಮಾರುತಿ ಪ್ಯಾಗೆ, ಸವರ್ಣೀಯರ ಪರವಾಗಿ ಸುಭಾಷ್ ಅಸ್ಟೂರೆ, ಪುರಸಭಾಧ್ಯಕ್ಷ ಸಿದ್ರಾಮಪ್ಪ ವಂಕಿ, ಆರೆಸೆಸ್‌ನ ಜಗನ್ನಾಥ್ ನಾಯಕ್, ವಕೀಲರಾದ ಲಕ್ಷ್ಮಣ್ ಕೊಳ್ಳ, ನೀಲಕಂಠ ಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

ಹಾಸ್ಟೆಲ್‌ಗೆ ಬೆಂಕಿ, ಅಂಬೇಡ್ಕರ್ ಪ್ರತಿಮೆ ಮೇಲಿನ ಹಲ್ಲೆ, ಬುದ್ಧ ಮಂದಿರ ನಾಶದ ಬಗ್ಗೆ ದಲಿತ ಮಾರುತಿಪ್ಯಾಗೆ ನೊಂದು ಸವರ್ಣೀಯರ ಹೇಯ ಕೃತ್ಯವನ್ನು ಖಂಡಿಸಿದಾಗ ಒಮ್ಮೆಯೇ ಮೇಲಿದ್ದು ಸವರ್ಣೀಯ ನಾಯಕರು "ಸಾಹೇಬ್ರ ನಮ್ಗೆ, ೧೫ ನಿಮಿಷ ಅವಕಾಶ ಕೊಟ್ರೆ ಹೊಲೆ ಮಾದಿಗರ ಸುಟ್ಬುಡ್ತೀವಿ" ಅಂದರು. "ಸರ್ಕಾರಿ" ಸವಲತ್ತಿನಿಂದ ಇವರೆಲ್ಲ ಹೆಚ್ಕೊಂಡಿದ್ದಾರೆ, ಇವ್ರ ಸೊಕ್ಕನ್ನ ಮುರಿಯಬೇಕು" ಎಂದು ಅಸ್ಟೂರೆ ಮಾತಿನ ಬೆಂಕಿಗೆ ಮತ್ತಷ್ಟು ತುಪ್ಪ ಹಾಕಿದರು. ಈ ಧಾಟಿಯಲ್ಲಿ ನಡೆದ ಬಿಸಿ ಬಿಸಿ ಮಾತುಗಳಿಂದ ಯಾವ ಸಂಧಾನವೂ ನಡೆಯಲಿಲ್ಲವಾದರೂ ತೋರಿಕೆಗೆ ಶಾಂತಿ ಕಾಪಾಡುವುದಾಗಿ ಸಕ್ಕರೆ ತಿಂದು ಚದುರಿದರು. ಹಗಲೆಲ್ಲ ಶಾಂತಿ ಸಭೆ ರಾತ್ರಿಯೆಲ್ಲ ಮತ್ತೆ ದಲಿತರ ಕೇರಿಗಳ ಮೇಲೆ ನಿರಂತರ ಹಲ್ಲೆಗಳು ಮುಂದುವರಿದವು.

ಏಪ್ರಿಲ್ ೩೧ ರಂದು ಶಾಂತಿ ಸಭೆಗೆ ಅಥವಾ ಶಾಂತಿ ಉಂಟುಮಾಡುವ ಯಾವ ಗುಣಗಳೂ ಇಲ್ಲದ ಕೆ.ಎಚ್. ಪಾಟೀಲ್‌ರನ್ನು ಮುಖ್ಯಮಂತ್ರಿ ಗುಂಡೂರಾವ್ ತಮ್ಮ ಪ್ರತಿನಿಧಿಯನ್ನಾಗಿ ಕಳುಹಿಸಿದ್ದರು. ಇವರ ಜತೆಗೆ ಸಚಿವರುಗಳಾದ ಧರ್ಮಸಿಂಗ್, ವೀರಶೆಟ್ಟಿ ಕುಸನೂರ್, ಮಾಣಿಕರಾವ್ ಪಾಟೀಲ್, ಉಪಸಭಾ ಪತಿ ಬಾಪೂರಾವ್ ಹುಲ್ಸ್ಯಾರ್ ಕರ್, ಶಾಸಕರಾದ ಭೀಮಣ್ಣ ಖಂಡ್ರೆ, ಮದನ್‌ಲಾಲ್, ಮಾಜಿ ಎಂ.ಪಿ ರಾಮಚಂದ್ರ ವೀರಪ್ಪ ಹಾಗೂ ಎಲ್ಲ ಪಕ್ಷಗಳ ಸ್ಥಳೀಯ ಮುಖಂಡರು, ಜಿಲ್ಲಾಧಿಕಾರಿ, ವಿಭಾಗಾಧಿಕಾರಿ, ಎಸ್. ಪಿ, ಡಿ.ಐ.ಜಿ. ಮುಂತಾದ ಅಧಿಕಾರಿಗಳು ಇದ್ದರು.

ಜಾತಿ ವೈಷಮ್ಯದ ಅಗ್ನಿಕುಂಡವಾಗಿದ್ದ ಭಾಲ್ಕಿಯನ್ನು ತಣ್ಣಗೆ ಮಾಡುವ ಬದಲು ಇಲ್ಲಿ ಮತ್ತಷ್ಟು ತುಪ್ಪ ಸುರಿಯುವ ಕೆಲಸ ನಡೆಯಿತು. ಈ ಸಭೆಯ ಆಕ್ರೋಶ, ಟೀಕೆಗೆ ಗುರಿಯಾದವರು ನಿಷ್ಠಾವಂತ ಜಿಲ್ಲಾಧಿಕಾರಿ ಬುಳ್ಳಾ ಸುಬ್ಬರಾವ್.

ಅಥವಾ…………………?

. ರಾಜಕಾರಣಿಗಳಿಗೆ ಸೆಡ್ಡು ಹೊಡೆಯದೆ ಕಾನೂನಿನ ಪ್ರಕಾರವಾಗಿ ಸರ್ಕಾರದ ಎಲ್ಲ ಪ್ರಗತಿ ಕಾರ್ಯಗಳನ್ನು ಚಾಚೂ ತಪ್ಪದೆ ಪಾಲಿಸಿದ ಸುಬ್ಬರಾವ್ ಅವರನ್ನು ಜಾತೀವಾದಿ, ಹರಿಜನರಿಗೇ ಎಲ್ಲವನ್ನು ಮಾಡುತ್ತಿದ್ದಾರೆ, ಇವರ ಧೈರ್ಯದಿಂದ ಮೆರೆಯುತ್ತಿರುವ ದಲಿತರನ್ನು ಜಿಲ್ಲೆಯದ್ಯಂತ ತಡೆಯಲಾಗದ ಪರಿಸ್ಥಿತಿ ಬಂದಿದೆ, ಮೊದಲು ಡೀಸಿಯನ್ನು ಇಲ್ಲಿಂದ ವರ್ಗಮಾಡಬೇಕೆಂದು ಖಂಡ್ರೆ ಸೇರಿದಂತೆ ಸವರ್ಣೀಯರೆಲ್ಲ ಒತ್ತಾಯಿಸಿದರು.

ಔರಾದ್ ತಾಲ್ಲೂಕು ಕಾಂಗ್ರೆ ಅಧಕ್ಷ ಗಣಪತಿರಾವ್ ಖೋಬಾ, ಕಲ್ಯಾಣರಾವ್ ಬಣಕೇರಿ ಮತ್ತು ಟ್ರಿಬ್ಯೂನಲ್ ಸದಸ್ಯ ಅಬ್ದುಲ್ ಹಬಿ ಜಾತಿ ಹೆಸರಿನಲ್ಲಿ ಬೈಯುತ್ತಿದ್ದಾಗ ಸುಬ್ಬರಾವ್ ತಲೆತಗ್ಗಿಸಿ ಕಣ್ಣಲ್ಲಿ ನೀರು ತುಂಬಿಕೊಂಡರು.

ಇವರ ಜತೆಗೆ ಇನ್ನಷ್ಟು ಖಾರದ ಮಾತುಗಳನ್ನಾಡಿದ ಖಂಡ್ರೆ ಸುಬ್ಬರಾವ್‌ರನ್ನು ವರ್ಗಾಯಿಸಬೇಕೆಂದು ಪಟ್ಟು ಹಿಡಿದರು, "ಈವೊತ್ತು ಏನ್ ಗುಜರಾತಿನಾಗೆ ಮೀಸಲಾತಿ ವಿರೋಧಿ ಚಳವಳಿ ಆರಂಭ ಆಗೈತೋ ಅದು ಅಲ್ಲಿಗೆ ನಿಲ್ಲೋಲ್ಲ ; ಜಾತಿ ಆಧಾರದ ಮೇಲೆ ಮೀಸಲಾತಿ ಇರೋವರ್ಗೆ ಇಂತಹ ಗಲಭೆಗಳೆಲ್ಲ ಆಗ್ತಾವೆ. ಇದು ಭಾಲ್ಕಿಯಿಂದ ಆರಂಭ ಅಷ್ಟೆ" ಎಂದು ಅತಿರೇಕದ ಮಾತುಗಳನ್ನಾಡಿ ಶಾಂತಿಯ ಬದಲು ಕೈಕೈ ಮಿಲಾಯಿಸುವ ಗೊಂದಲ ಉಂಟುಮಾಡಿದರು. **ಶಾಂತಿ ಹೋಗಿ ಅಲ್ಲೆ ಹೆಣ ಬೀಳುತ್ತಿದ್ದವು !**

ಸಭೆಯಲ್ಲಿ ಭಾಗವಹಿಸಿದ್ದ ಸಚಿವ ಮಂದಿಯಾಗಲಿ ಅಥವಾ ಮುಖ್ಯಮಂತ್ರಿಯ ರಾಯಭಾರಿಯಾಗಿ ಬಂದಿದ್ದ ಕೆ.ಎಚ್. ಪಾಟೀಲರಾಗಲಿ ಯಾವ ಸಂಧಾನ ಸೂತ್ರವನ್ನು ಮಾಡುವ ಬದಲು ನಿಷ್ಠೆಗೆ ಹೆಸರಾದ ದಲಿತವರ್ಗದ ಜಿಲ್ಲಾಧಿಕಾರಿ ಸುಬ್ಬರಾವ್‌ರನ್ನು ವರ್ಗಕ್ಕೆ ಶಿಫಾರಸು ಮಾಡಿದರು.

ಪಂಚಮಕ್ಕಾಗಿ ಅಲೆದಲೆದು………

ಮಾನ್ಯ ಸಂಪಾದಕರೆ,

ನಾನು ವರ್ಷದ ಹಿಂದೆ ಪಂಚಮಕ್ಕೆ ಚಂದದಾರಳಾಗಿದ್ದೆ. ಆದರೆ ನಾನು ದುರಾದೃಷ್ಟವಸಾತ್ ಪಂಚಮ ಮುಂದುವರಿಸಲು ಚಂದಾ ಹಣವನ್ನು ಕಳಿಸುವುದನ್ನು ಮರೆತೆ. ಇತ್ತೀಚೆಗೆ ಪಂಚಮದ ಒಂದೂವರೆ ರೂಪಾಯಿ ಬೆಲೆಯ ಅಂಬೇಡ್ಕರ್ ನೆನಪಿನ ಸಂಚಿಕೆ, ಹಾಗೂ ಐದು ರೂಪಾಯಿ ಬೆಲೆಯ 132 ಪುಟಗಳ ಮೀಸಲಾತಿ ಸಂಚಿಕೆಯನ್ನು ಆಕಸ್ಮಾತಾಗಿ ನೋಡಿ ಕಾಡಿಬೇಡಿ ಪಡೆದು ಓದಿ ಆಶ್ಚರ್ಯಪಟ್ಟೆ. ತುಂಬಾ ಅಂದರೆ ತುಂಭಾ ಚೆನ್ನಾಗಿ ಪತ್ರಿಕೆ ಹೊರಬಂದಿದೆ. ಹತ್ತು ರೂ ಕೊಟ್ಟ ಚಂದದಾರರಿಗೆ ನೀವು 7½ ರೂಪಾಯಿ ಬೆಲೆಯ ಈ ಎರಡು ಸಂಚಿಕೆಯನ್ನು ಉಚಿತವಾಗಿ ನೀಡಿದ್ದೀರಿ. ಬಹುಶಃ ಬೇರೆಯವರಾಗಿದ್ದರೆ ಇದಕ್ಕೂ ಹಣ ಪಡೆಯುತ್ತಿದ್ದರು. ನಾನು ಚಂದಾ ಮುಂದುವರೆಸಿದುದಕ್ಕೆ ಪರಿತಪಿಸಿ ತಕ್ಷಣವೇ ಹತ್ತು ರೂ ಹಣ ಕಳಿಸಿ ಚಂದಾದಾರಳಾದರೂ ಅಷ್ಟರೊಳಗೆ ಎಲ್ಲಾ ಪ್ರತಿಗಳು ಮುಗಿದು ಹೋಗಿರುವುದು ತಿಳಿಯಿತು. ದಯವಿಟ್ಟು ನಿಮ್ಮ ಬಳಿ ಇರುವ ಮೀಸಲಾತಿ ಸಂಚಿಕೆಯನ್ನೇ ಕಳಿಸಿಕೊಡುವಿರಾ?

ಆರ್. ಪೂರ್ಣಿಮ
ಶಿವಮೊಗ್ಗ

['ಮೀಸಲಾತಿ' ಪುಸ್ತಕವು ಉತ್ತಮ ಪೇಪರ್, ಕವರ್‌ನೊಡನೆ ಕೂಡ ಅಚ್ಚಾಗಿದೆ. ಆದರೆ ಇದು ಚಂದದಾರರಿಗಲ್ಲ. ಇದರ ಬೆಲೆಯು ಹತ್ತು ರೂಪಾಯಿ ಆಸಕ್ತರು 8 ರೂಪಾಯಿ ಕಳಿಸಿದಲ್ಲಿ ಅಂಚೆ ವೆಚ್ಚ ನಾವೇ ವಹಿಸಿಕೊಂಡು ಕಳಿಸಲಾಗುವುದು-ಸಂ.]

6

ಇದು ಅನುಭವದ ಪುಟ. ಜಾತಿ ಮತ ಅಸ್ಪೃಶ್ಯತೆ ಬಗ್ಗೆ ನಿಮ್ಮನ್ನು ಅಲ್ಲಾಡಿಸಿದಂಥ ಚಿಂತೆಗೀಡುಮಾಡಿದಂಥ ಅನುಭವಗಳು ಅನೇಕ ನಿಮ್ಮ ಬದುಕಲ್ಲಿ ಆಗಿರಬಹುದು. ಈ ಅನುಭವಗಳ ಹಿಡಿದು ಪಂಚಮವು ತನ್ನ ಓದುಗರಿಗೆ ನೀಡಲು ಬಯಸುತ್ತದೆ. ಇಂಥ ಅನುಭವದ ತುಣುಕನ್ನು ಒಂದು ಪುಟದಷ್ಟು ಬರೆದು ಕಳಿಸಿರಿ. ಪ್ರಕಟವಾದ ಅನುಭವದಾರರಿಗೆ ಒಂದು ವರ್ಷದ ಪಂಚಮವನ್ನು ಉಚಿತವಾಗಿ ಕೊಡಲಾಗುವುದು– ಸಂಪಾದಕ

ಅನುಭವದ ಗಣಿಯಿಂದ

ಕುಸಿಯುತ್ತಿರುವ ನೆಲ ನಿಲ್ಲುವುದೆಂದು

ಸುಮಾರು ೧೯೭೮ನೇ ಇಸವಿ. ಆಗ ನಾನು ಶ್ರೀರಂಗಪಟ್ಟಣ ತಾಲ್ಲೂಕು ಕೆ. ಶೆಟ್ಟಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಪಾದ್ಯಾಯನಾಗಿ ಕೆಲಸ ಮಾಡುತ್ತಿದ್ದೆ. ನಾನು ನನ್ನ ಹೆಂಡತಿಯೊಂದಿಗೆ ಅದೇ ಗ್ರಾಮದ ಒಕ್ಕಲಿಗ ಸಿಂಗ್ರಯ್ಯನವರ ಮನೆಯಲ್ಲಿ ವಾಸವಾಗಿದ್ದೆ. ಅಲ್ಲಿ ಇದ್ದದ್ದು ಕೇವಲ ಹತ್ತು ತಿಂಗಳು ಮಾತ್ರ.

ನನ್ನ ಶಾಲೆಯಲ್ಲಿ ಎನ್. ಮಾದಯ್ಯ ಎಂಬ ಹರಿಜನ ಉಪಧ್ಯಾಯರಿದ್ದರು. ಅವರೂ ನನ್ನಂತೆಯೇ ಯುವಕರು. ಚೆನ್ನಾಗಿ ಪಾಠ ಮಾಡಬೇಕೆಂಬ ಹಂಬಲವನ್ನು ನನ್ನಂತೆಯೇ ಹೊಂದಿದ್ದವರು. ನಾಟಕ, ಸಾಹಿತ್ಯ, ಕ್ರೀಡೆ ಇತ್ಯಾದಿ ತೆವಲುಗಳನ್ನು ನನ್ನಂತೆಯೇ ಹತ್ತಿಸಿಕೊಂಡಿದ್ದವರು. ಸಮಾನ ವಯಸ್ಕರೂ ಸಮಾನ ಮನೋಧರ್ಮದವರೂ ಆದ ನಾವು ಒಬ್ಬರನ್ನೊಬ್ಬರು ಏಕವಚನದಲ್ಲೇ ಸಂಭೋಧಿಸುವಷ್ಟು ಆತ್ಮೀಯತೆಯನ್ನು ಹೊಂದಿದ್ದೆವು.

ನನ್ನ ಮನೆಯಲ್ಲಿ ಹೆಂಡತಿ ಕೊಂಚ ಸಂಪ್ರದಾಯಸ್ಥಳೇ. ಅಪ್ಪ ಅಮ್ಮನ ವಿಚಾರ ಹೇಳುವುದೇ ಬೇಡ! ಅಲ್ಲಿ ನಾವಿಬ್ಬರೇ. ನಾನೇ ಯಜಮಾನ, ನನ್ನ ಹೆಂಡತಿಗೆ ಹೇಳಿದೆ. 'ನೋಡು ನಿನ್ನ ಜಾತಿ ಗೀತಿ ಗೊಡ್ಡು ಪುರಾಣ ತೆಗೀಬೇಡ ಅಂತ. ನನ್ನ ಅಪ್ಪ ಅಮ್ಮ ಇಲ್ಲ ಅಂತಲೋ, ಇಲ್ಲ ನನ್ನ ಕಟ್ಟಾಜ್ಞೆಗೆ ಹೆದರಿಯೋ ನನ್ನಮಾತನ್ನು ಶಿರಸಾವಹಿಸಿದಳು. ಹಾಗಾಗಿ ಗೆಳೆಯ ಮಾದಯ್ಯ ನನ್ನ ಮನೆ ಒಳಗೆ ಬರುವಂತಾಯಿತು. ನಾನೂ ಅವನೂ ಒಟ್ಟಿಗೆ ಕೂತು ಹರಟುತ್ತ, ಕಾಫಿ, ತಿಂಡಿ, ಊಟ ಇತ್ಯಾದಿ ಮಾಡುವಂತಾಯಿತು.

ಒಂದು ದಿನ ಮನೆ ಗೌಡರ ಹೆಂಡತಿ ಗೌಡತಿ ಹೇಳಿದರು. 'ಏನು ಮೇಸ್ಟ್ರೆ, ನಿಮಗೇನು ಜಾತಿ ಗೀತಿ ಯಾವುದೂ ಇಲ್ಲವೆ? ಎಲ್ಲರನ್ನೂ ಹಟ್ಟಿ ಒಳಕ್ಕೆ ಬುಟ್ಟ್ಕೊಳ್ಳೊದಾ?' 'ನನಗೆ ಅದರಲ್ಲೆಲ್ಲ ನಂಬಿಕೆ ಇಲ್ಲ' ಅಂತ ನಾನು ಅಂದೆ. ಕೆಲವು ದಿನಗಳು ಹಾಗೇ ಕಳೆದವು. ಒಂದು ಸಲ ನನ್ನವಳು ಮೈಸೂರಿಗೆ ಬಂದು ತಿಂಗಳ ಮೇಲೆ ತಂಗಿದಳು. ನನ್ನ ಊಟ, ತಿಂಡಿ, ಕಾಫಿಗೆ ಹೋಟಲನ್ನೇ ಆಶ್ರಯಿಸಬೇಕಾಯಿತು. ನಾನು ಮನೆಗೇ ತರಿಸುತ್ತಿದ್ದೆ. ಹೋಟಲ್ಲಿಗೆ ಹೋಗುತ್ತಿರಲಿಲ್ಲ. ಅದು ಲಿಂಗಾಯಿತರದು. ಮಾದಯ್ಯನೂ ಬಂದಾಗ ಅವನಿಗೂ ತರಿಸಿಕೊಡುತ್ತಿದ್ದೆ.

ಒಂದು ದಿನ ಇದ್ದಕ್ಕಿದ್ದ ಹಾಗೆ ಕಾಫಿ ತಿಂಡಿ ಬರಲಿಲ್ಲ. ಹುಡುಗನನ್ನು ಕರೆದು ಯಾಕೆ ಎಂದು ಕೇಳಿದೆ. 'ನೀವೆ ಹೋಗ್ಬೇಕಂತೆ ಸಾರ್' ಎಂದ. ನಾನು ಹೋಟಲ್ಲಿಗೆ ಹೋಗಿ 'ಯಾಕೆ ನಾಗರಾಜ ಕಳಿಸಲಿಲ್ಲ' ಎಂದೆ ಅದಕ್ಕೆ ಅವನು 'ಚಲುವಯ್ಯನೋರು ಬಂದು ಗಲಾಟೆ ಮಾಡಿಹೋದ್ರು. ಮಾದಯ್ಯನೋರಿಗೂ ಕಾಫಿ ಕೊಡ್ತೀಯ, ಅವೆಂಗೆ ಹೋಟ್ಲು ನಡಸ್ತೀಯ, ಅಂದ್ರು. ನಾವು ಗರೀಬರು, ಅವರ್ನೆಲ್ಲ ಎದುರು ಹಾಕಿ ಕೊಳ್ಳೊಕೆ ಆದತಾ' ಎಂದ

ನಿಂತ ನೆಲ ಕುಸಿದ ಹಾಗಾಯಿತು.

–ನಾಗಚಂದ್ರ

ದುಡ್ಡು ಬಂದ ದಾರಿಯಲ್ಲಿ............

ನಾನು ೧೯೭೮ನೇ ಇಸವಿಯಲ್ಲಿ ತುಮಕೂರಿನಲ್ಲಿರುವ ಶ್ರೀ ಸಿದ್ಧಾರ್ಥ ಜೂನಿಯರ್ ಕಾಲೇಜ್‌ನಲ್ಲಿ ಒಬ್ಬ ಇತಿಹಾಸ ಪ್ರದ್ಯಾಪಕನ ಹುದ್ದೆ S.C. ಗೆ Reserve ಎಂದು ನಾನೇ Menagement ನ ಸೆಕ್ರೆಟರಿಯವರಿಂದ ಹಣ ಪಡೆದು ಅಪ್ಪಣೆಯಂತೆ ಬೆಂಗಳೂರಿಗೆ ಹೋಗಿ ಪತ್ರಿಕೆಗಳಿಗೆ ಜಾಹಿರಾತುಹಾಕಿಸಿ ಬಂದಿದ್ದೆ. ಏಕೆಂದರೆ ಮೊದಲು ಇತಿಹಾಸ ಪ್ರಧ್ಯಾಪಕರಾಗಿದ್ದವರು S.C. ಅವರು ರಾಜಿನಾಮೆ ನೀಡಿದ್ದರಿಂದ ಅದು ಹಾಗೆಯೇ S.C. ಗೆ ಕೊಡಬೇಕೆಂದು ತೀರ್ಮಾನಿಸಿ ನನ್ನಲ್ಲಿ ಆಸೆ ಹುಟ್ಟಿಸಿದ್ದರು. ನಂತರ "ಯಾವತ್ತು ಇಂಟರ್‌ವ್ಯು ಕೊಡ್ತಿರಾ" ಅಂತ ಕೇಳಿದೆ. "Honourary ಕೆಲಸ ಮಾಡ್ತಿರು. ಹೆಂಗಿದ್ದರು ನಿಂಗೇ ಕೊಡ್ತಿವಿ" ಅಂದರು. ಅಂತೂ ಒಂದುದಿನ ಇಂಟರ್‌ವ್ಯು ಬಂತು. ಹೋದೆ. S.C. candidate ಗಳಲ್ಲಿ ಯಾರೂ ಅರ್ಜಿಹಾಕಿರಲಿಲ್ಲ ಈ ದೇಶದಲ್ಲಿ ನಾನೊಬ್ಬನೆ ಹಾಕಿದ್ದೆ. ೩ಗಂಟೆಗೆ ಇಂಟರ್‌ವ್ಯು ಸಮಯ ಬಂತು. ಯಾರು ಇರಲಿಲ್ಲ. ನಾನಲ್ಲೆ ನಿಂತಿದ್ದೆ. ನಂತರ ೩ ಕಾರು ಬಂದವು. Management ಕಡೆಯವರು ಬಂದರು. "S.C. ಯಾರು ಇಲ್ಲ ನಿನಗೇ ಆರ್ಡರ್ ಕಳುಹಿಸುತ್ತಿವಿ ಹೋಗಯ್ಯ" ಅಂದರು.

ಆದರೆ ಮಾರ್ಕ್ಸ್‌ಕಾರ್ಡ್‌ನ್ನು ಇಂಟರ್‌ವ್ಯು ಸಮಯದಲ್ಲಿ ನಾನು ತೋರಿಸಿದ್ದರೂ 'produce ಮಾಡಿಲ್ಲ' ಅಂತ ಹೇಳಿ, ಪಾವಗಡದ ಕಡಿಕ್ಕೆ ದುಡ್ಡು ಬಂದ ದಾರಿಯಲ್ಲಿ ಆರ್ಡರ್ ಹೋಯ್ತು. ನಮ್ಮವರ ಸಂಸ್ಥೆಯಲ್ಲೂ ನಮ್ಮ ಹುದ್ದೆ ನಮಗೆ ಸಿಗಲಿಲ್ಲ!

ದುಡ್ಡು ಅವರನ್ನ ಕೊಂಡ್ಕಂಡಿತ್ತೆ?

–ರೇವಯ್ಯ

ಸತ್ತಂಥ ಸೂರ್ಯ ಚಂದ್ರ ಮತ್ತು ನಾನು

ಮುದುಡಿ ಕೂತಿರುವೆ
ಬೋಳು ಟೊಂಗೆಗಳ ಮರ
ಬೆಂಕಿ ಮುಟ್ಟದು ನನ್ನ
ಬೆಳಕು ಮುಟ್ಟದು ನನ್ನ
ಕೈ ಚಾಚಿ ನಿಂತರೂ
ತಾಕದು ಸಾವು
ಗಿಡ ಗಿಡದ ಬುಡದಲ್ಲಿ ಬಂಧು ಬಳಗದ ರಕ್ತ
ಹೂ ಹಣ್ಣು ಹಕ್ಕಿಗಳ ಬಲಿಕೊಟ್ಟರು.
ಮರ ಮರದ ಮರೆಯಲ್ಲಿ ಕೈಕಾಲು ತಲೆ ಎಲುಬು
ನನ್ನಪ್ಪ ಅವ್ವರ ಕತ್ತರಿಸಿದವರು ನಿಂತಿಹರು
ಬೆಟ್ಟ ಗುಡ್ಡದ ಹಾಗೆ
ನಿಂತಿಹರು
ನೆತ್ತರಹೊಂಡದಲಿ ಬಾನ ಚುಕ್ಕಿಗಳು ನರಳುತ್ತಿದ್ದೊ
ಅಪ್ಪ ಅವ್ವರ ಚರ್ಮದ ತಮಟೆ ಹಾಡುತ್ತಿದ್ದೊ
ಸೊಲ್ಲಡಗಿ ಹಾಡು ಸೆಲೆಯೊಡೆಯುತ್ತಿದೊ
ಎಲ್ಲ ನನ್ನ ಹಾಗೇ
ನಾನು ನಿಮ್ಮೆಲ್ಲರ ಸಾವು

–ಮುಳ್ಳೂರು ನಾಗರಾಜ

ಜಪಾನ್ ಹೊಲೆಯರು

ನಿಕ್ರಂ ಪಾಂಡ್ಯ

ಜಪಾನ್ ಅಚ್ಚರಿಯ ನಾಡು ......

ಮುವತ್ತೈದು ವರ್ಷಗಳ ಹಿಂದೆಯಷ್ಟೆ ಪರಮಾಣು ಹೊಡೆತಕ್ಕೆ ತುತ್ತಾಗಿ, ಈ ನಾಡಿನ ಕಥೆ ಮುಗಿಯಿತು ಎಂಬಂಥ ಆರ್ಥಿಕ ಕುಸಿತಕ್ಕೆ ಒಳಗಾಗಿತ್ತು. ಆದರೆ ಈಗ ತಾಂತ್ರಿಕ ವಿಜ್ಞಾನದಲ್ಲಿ ಜಗತ್ತಿನ ಮುಂದುವರಿದ ರಾಷ್ಟ್ರಗಳಿಗೆ ಸಮವಾಗಿ ಊಹಾತೀತವಾದ ಪ್ರಗತಿ ಸಾಧಿಸಿದ ರಾಷ್ಟ್ರವಿದು. ಅಮೆರಿಕದ ಔದ್ಯೋಗಿಕ ವಲಯಗಳಲ್ಲಿ ಜಪಾನ್ ಎಂದರೆ ಸಿಂಹಸ್ವಪ್ನ.

ಇಂಥ ನಾಡಿನ ಸಮಾಜ ತನ್ನ ಹೊಟ್ಟೆಯಲ್ಲಿ 'ಅಸ್ಪೃಶ್ಯ'ರನ್ನು ಸೃಷ್ಟಿಸಿಕೊಂಡು ಮಾನವೀಯ ಹಕ್ಕುಗಳನ್ನು ಬದಿಗೊತ್ತಿ, ಸಾಮಾಜಿಕ ದಬ್ಬಾಳಿಕೆ, ತಾರತಮ್ಯ, ಅಸಮಾನತೆ, ಶೋಷಣೆಯ ವಿಷಗಳನ್ನು ಕಕ್ಕುತ್ತಿದೆ ಎಂದರೆ ನಂಬಬಹುದೇ?

ನಿಜವಾಗಿಯೂ ಜಪಾನ್ ಅಚ್ಚರಿಯ ನಾಡು. ಆತ್ಮಗೌರವ ಸಮಾನತೆಗಾಗಿ ಹೋರಾಡಲೆಳಸುವ, ಮಾನವ ಹಕ್ಕುಗಳನ್ನು ಎತ್ತಿ ಹಿಡಿವ ಚಳವಳಿಗಳು ಜಗತ್ತಿನಾದ್ಯಂತ ಅನಾದಿ ಕಾಲದಿಂದ ಇದ್ದದ್ದೆ, ಅನಂತವಾದದ್ದೆ. ಇಂಥ ಅಪೂರ್ಣ ಹೋರಾಟದಲ್ಲಿ ತೊಡಗಿರುವ ಸಮುದಾಯಗಳಲ್ಲಿ ಜಪಾನಿನ 'ಅದೃಶ್ಯ' ಹೊಲೆಮಕ್ಕಳೆನಿಸಿಕೊಂಡ ಬುರಾಕುಮಿನ್‌ಗಳದೂ ಒಂದು.

ಬುರಾಕುಮಿನ್‌ಗಳು ಜಪಾನಿನ ಅಸ್ಪೃಶ್ಯರು. ಇವರನ್ನು 'ಎಟಾ' ಎನ್ನುತ್ತಾರೆ. 'ಯೋಟ್ಸು' ಅನ್ನುತ್ತಾರೆ. ಹೀನಿನ್ ಎಂದು ಕರೆಯುತ್ತಾರೆ. 'ಎಟಾ, ಎಂದರೆ ಹೊಲಸು ತುಂಬಿಕೊಂಡವ, ಕೊಳಕ ಎಂದರ್ಥ. ಯೋಟ್ಸು ಎಂದರೆ 'ನಾಲ್ಕು' ಕಾಲಿನ ಪ್ರಾಣಿ. ಹೀನಿನ್ ಎಂದರೆ ಅಮಾನವ.

ಇವರ ವಾಸ ಊರ ಜನ ಸಂಪರ್ಕಿಸದ ಊರ ಹೊರಗಿನ ಗೆಟೊಗಳು (ಹೊಲೆಗೇರಿಗಳು). ಜಪಾನಿನ ಉದ್ದಗಲಕ್ಕೆ ಇಂದು ಸುಮಾರು 6000 ಗೆಟೊಗಳಿವೆ. ಲೆಕ್ಕಕ್ಕೆ ಸಿಕ್ಕ ಪ್ರಕಾರ 30ಲಕ್ಷ ಬುರಾಕುಮಿನ್‌ಗಳಿದ್ದಾರೆ.

ಯಾರು ಈ ಜನ, ಏನೀ ತಾರತಮ್ಯ.

ದೈಹಿಕವಾಗಿ, ಜನಾಂಗಿಕವಾಗಿ, ಸಾಂಸ್ಕೃತಿಕವಾಗಿ ಈ ಮಂದಿ ಜಪಾನಿನ ಇತರರಿಗಿಂತ ಭಿನ್ನವೇನಲ್ಲ. ಆದರೂ ಪರಂಪರಾಗತವಾಗಿ ತಾರತಮ್ಯಕ್ಕೊಳಗಾಗಿ ಸಮಾಜದ ಶ್ರೇಣಿ ವ್ಯವಸ್ಥೆಯ ಅತ್ಯಂತ ಕೆಳಸ್ತರದಲ್ಲಿ ನಿಂತು ಅವಮಾನಕರ ದಬ್ಬಾಳಿಕೆಗೆ ಒಳಗಾಗಿದ್ದಾರೆ.

ಮೇಲುಜಾತಿಯ ಜನ ಇವರನ್ನು ಮುಟ್ಟಿಸಿಕೊಳ್ಳಲೊಲ್ಲರು. ಇತರರ ಮನೆಗಳನ್ನು ಸಮೀಪಿಸಿದಾಗ ಯಾವನೇ ಎಟಾ ಅಥವಾ ಬುರಾಕುಮಿನ್ ತನ್ನ ತಲೆಯುಡುಗೆ ಹಾಗೂ ಪಾದುಕೆಗಳನ್ನು ತೆಗೆದು ಮನೆಯಂಗಳಕ್ಕೆ ಕಾಲಿಡಬೇಕು. ಹೊಸಲು ದಾಟಿ ಒಳಹೋಗಬಾರದು. ಇತರ ಜನರೊಡನೆ ಕೂರುವ, ಉಣ್ಣುವ, ಧೂಮಪಾನ ಮಾಡುವ ಸವಲತ್ತು ಇವನಿಗಿಲ್ಲ. ದನ ಕಡಿವ, ಚರ್ಮ ಹದ ಮಾಡುವ, ಚಪ್ಪಲಿ ಹೊಲಿವ, ಮಲ ಹೊರುವ ಕಾಯಕಗಳು ಇವನಿಗೆ ಮೀಸಲು. ಚಪ್ಪಲಿ ಹೊಲಿಸಿಕೊಂಡ "ಮಡಿ" ಮಂದಿ ಇವರಿಗೆ ಹಣವನ್ನು ನೇರವಾಗಿ ನೀಡದೆ ಮೈಲಿಗೆಯಾಗುವುದನ್ನು ತಪ್ಪಿಸಿಕೊಳ್ಳಲು ಉದ್ದನೆಯ ಕೋಲ ತುದಿಗೆ ಹಣದ ಗಂಟುಕಟ್ಟಿ ನೀಡುತ್ತಾರೆ.

'ಎಟಾ'ಗಳು ಮನುಷ್ಯರೇ ಅಲ್ಲ, ಪ್ರಾಣಿ ವಂಶಜರು ಎಂದೇ ಬಹುಮಂದಿಯ ಭಾವನೆ. ಅವರಿಗೆ ನಾಲ್ಕೆ ಬೆರಳುಗಳಿವೆ ಎಂದೂ ಕಲ್ಪನೆ. ಹೀಗಾಗಿ ನಾಲ್ಕುಕಾಲಿನ ಪ್ರಾಣಿ ಎಂಬರ್ಥದ 'ಯೋಟ್ಸು' ಎಂದೇ ಕರೆಯುತ್ತಾರೆ.

ಆರಂಭ ದಿನಗಳಲ್ಲಿ ಜನಗಣತಿಯಲ್ಲಿಯೂ ಇವರನ್ನು ಸೇರಿಸಿಕೊಳ್ಳುತ್ತಿರಲಿಲ್ಲ. ಮನುಷ್ಯರನ್ನು ಮಾತ್ರ ತಾನೇ ಕಾಣಿಸುತ್ತಿದ್ದುದು. ಜಪಾನಿನ ಭೂಪಟಗಳಲ್ಲಿಯೂ ಈ ಅಸ್ಪೃಶ್ಯ ಸಮುದಾಯಗಳಿರುವ ಪ್ರದೇಶಗಳು ಕಾಣೆಯಾಗಿರುತ್ತಿದ್ದವು. ಜಪಾನಿನ ಜನರಿಗೆ ಬುರಾಕುಮಿನ್‌ಗಳು 'ಅದೃಶ್ಯ ನೆಲ'ದಲ್ಲಿ ವಾಸಿಸುವ ಜನ.

ಸಾಂಸ್ಕೃತಿಕ ವಲಯಗಳಲ್ಲಿ ಜನ ನೆರೆತಾಗ 'ಎಟಾ' ಹೆಸರನ್ನು ಉಚ್ಚರಿಸುವುದೇ ಸೌಜನ್ಯದ ಚಿಹ್ನೆಯಾಗಿರಲಿಲ್ಲ.

ಕೆಲವರ ಅಭಿಪ್ರಾಯದ ಪ್ರಕಾರ ಬುರಾಕುಮಿನ್‌ಗಳು ಜಪಾನಿನ ಆದಿವಾಸಿಗಳು, ಅನಾಗರಿಕ ಮೂಲನಿವಾಸಿಗಳು. ಇದನ್ನು ಬಹಳ ಮಂದಿ ಒಪ್ಪುವುದಿಲ್ಲ. ಕ್ರಿ. ಶ. ೬ನೇ ಶತಮಾನದಲ್ಲಿ ಜಪಾನನ್ನು ಪ್ರವೇಶಿಸಿದ ಬೌದ್ಧ ಮತ ಈ ಜನರ ಸೃಷ್ಟಿಗೆ ಕಾರಣವಾಯಿತು–ಎಂದೂ ಒಂದು ವಾದ. ಅಹಿಂಸೆಯೇ ಮೂಲ ಕೇಂದ್ರವಾದ ಬೌದ್ಧಧರ್ಮವನ್ನು ಒಪ್ಪದೆ

1870ರ ರಾಜಶಾಸನ

ಇತ್ತೀಚಿನ ವರ್ಷಗಳಲ್ಲಿ ಎಟಾ ಜನರ ನೈತಿಕ ಮಟ್ಟ ಅತ್ಯಂತ ದುಷ್ಟವಾಗಿದೆ. ಅವರು ಅನೇಕ ಸಲ ಹಿಂಸಾಪೂರ್ಣವಾಗಿ ವರ್ತಿಸುತ್ತಾರೆ. ಆದರೆ ಅವರು ಈ ಕೆಳಗಿನ ನಿಯಮಗಳನ್ನು ಪಾಲಿಸತಕ್ಕದ್ದು.

1. ರಸ್ತೆಯ ಒಂದು ಅಂಚಿನಲ್ಲಿಯೇ ನಡೆಯಬೇಕು. ಇತರ ಪಾದಚಾರಿಗಳಿಗೆ ತೊಂದರೆಯಾಗದಂತೆ ವರ್ತಿಸಬೇಕು.

2. ಸೂರ್ಯೋದಯದಿಂದ ಸೂರ್ಯಾಸ್ತವಾಗುವವರೆಗೆ ಅವರ ಚಲನವಲನವಿರಬೇಕು. ನಂತರ ನಗರದಲ್ಲಾಗಲಿ ಬಡಾವಣೆಗಳಲ್ಲಾಗಲಿ ಅಲೆದಾಡಬಾರದು. ತಮ್ಮ ಸ್ವಂತ ಸಮುದಾಯದಲ್ಲಿ ರಾತ್ರಿ ಕಾಲದಲ್ಲಿ ಬೇಕಾಬಿಟ್ಟಿ ಅಲೆದಾಡಬಾರದು. ಸೆಟ್ಸುಬನ್ ರಜಾ ದಿನಗಳ ಕಾಲಧಲ್ಲಿ ಸಂಜೆ ಐದರವರೆಗೆ ಮಾತ್ರ ಅವರು ಓಡಾಡಬೇಕು. ನಂತರ ಖಂಡಿತ ಕೂಡದು.

3. ಅವರು ನಗರದಲ್ಲಿ ತಿನ್ನಬಾರದು ಕುಡಿಯಬಾರದು.

4. ಛತ್ರಿಗಳನ್ನಾಗಲೀ ತಲೆಯುಡುಗೆಗಳನ್ನಾಗಲೀ ಬಳಸಬಾರದು–ಮಳೆಗಾಲವನ್ನು ಬಿಟ್ಟು.

5. ಪಾದರಕ್ಷೆಗಳನ್ನು ಬಳಸಬಾರದು.

ಹೊರಗುಳಿದ ಮಂದಿ ಸಮಾಜ ವಲಯದ ಆಚೆಗೆ ನಿಂತು ಅಸ್ಪೃಶ್ಯರಾಗಿರಬಹುದು. ರಕ್ತ ಹಾಗೂ ಸಾವು ಈ ಎರಡಕ್ಕೆ ಸಂಬಂಧಪಟ್ಟ ದನ ಕಡಿವ, ಹೆಣ ಹೂಳುವ ಮಂದಿ ಸಮಾಜದ ದೃಷ್ಟಿಯಲ್ಲಿ ಹೊಲಸು ತುಂಬಿದ 'ಎಟಾ'ಗಳಾದರು.

ನಿರಂಕುಶ ಪ್ರಭುತ್ವವಿದ್ದ ಕಾಲದ ಪ್ರಾಚೀನ ಜಪಾನಿನಲ್ಲಿ ಗುಲಾಮರಾಗಿದ್ದ ಇವರು ಹೆಣ ಹೂಳುವ, ಮಸಣ ಕಾಯುವ ಮಂದಿಯಾಗಿದ್ದರಂತೆ. ಆ ಕಾಲದ ಶ್ರೀಮಂತರ ಹವ್ಯಾಸ ಬೇಟೆಯ ಗಿಡುಗಗಳನ್ನು ಸಾಕುವುದು. ಈ ಗಿಡುಗಗಳನ್ನು ನೋಡಿಕೊಳ್ಳುವ ಮಂದಿಗೆ ಎಟೋರಿ (ಆಹಾರ ಸಂಗ್ರಾಹಕರು) ಎನ್ನುತ್ತಿದ್ದರು. ಇದರ ಹ್ರಸ್ವರೂಪವೇ 'ಎಟಾ' ಎಂದು ಒಂದು ಅಭಿಪ್ರಾಯ.

ಎಟಾ (ಹೊಲೆಯ) ಎಂಬ ಪದವನ್ನು ತುಚ್ಛಾರ್ಥದಲ್ಲಿ ಅಪಮಾನಮಾಡುವ ಉದ್ದೇಶದಿಂದ ಬಳಸುತ್ತಾರೆ.

ಇಂದೂ ಕೂಡ ಜಪಾನಿನಲ್ಲಿ ಯಾವನೇ ಬುರಾಕುಮಿನ್ ವ್ಯಕ್ತಿ ತಾನು ಆ ಸಮುದಾಯಕ್ಕೆ ಸೇರಿದವನು ಎಂದು ಸಾರ್ವಜನಿಕವಾಗಿ ಸ್ಪಷ್ಟಪಡಿಸಿಕೊಂಡರೆ ಆತನಿಗೆ ಯಾವುದೇ ಸಾಮಾಜಿಕ ಆರ್ಥಿಕ ಸ್ಥಾನಮಾನ ದೊರಕದು. ಇಂದು ಸಾವಿರಾರು ಜನ ತಮ್ಮ 'ಮೂಲ'ವನ್ನು ಹೊರಗೆಡವದೆ ಜನಸಾಗರದಲ್ಲಿ 'ಅದೃಶ್ಯ'ವಾಗಿ ಸ್ಥಾನಮಾನಗಳನ್ನು ಗಳಿಸಿಕೊಂಡು ಬದುಕುತ್ತಿದ್ದಾರೆ. ಆದರೂ ಯಾವ ಗಳಿಗೆಯಲ್ಲಿ ತಮ್ಮ ಗುರುತು ಹೊರಬಿದ್ದು ಅವಮಾನಕ್ಕೀಡಾಗಬೇಕಾಗುತ್ತದೆ ಎಂಬ ಮಾನಸಿಕ ಭಯದಿಂದ ತಲ್ಲಣಗೊಂಡೇ ಇರುತ್ತಾರೆ.

ಇಂಥ ಅವಮಾನಕರ ಅಸಹ್ಯ ಸಾಮಾಜಿಕ ನಿರ್ಬಂಧಗಳಿದ್ದರೂ ಒಂದು ಕಾಲದಲ್ಲಿ ಎಟಾ ಮಂದಿ ರಾಷ್ಟ್ರದ ಆರ್ಥಿಕ ಜೀವನದಲ್ಲಿ ಗಮನಾರ್ಹ ಸ್ಥಾನವನ್ನು ಉಳಿಸಿಕೊಂಡವರೇ ಆಗಿದ್ದರು. ಏಕೆಂದರೆ ಮಾಂಸ ಕಡಿವ, ಹಾಗೂ ಚರ್ಮಗಾರಿಕೆಯಂಥ ಉದ್ಯಮಗಳ ಏಕಸ್ವಾಮ್ಯ ಇವರದೇ ತಾನೆ. ಕಾಲಕ್ರಮೇಣ ಚರ್ಮ ನೇಯ್ಗೆ, ಬುಟ್ಟಿಗಾರಿಕೆ ಇತ್ಯಾದಿ ಉದ್ಯಮಗಳೂ ಇವರದೆ ಆಗಿತ್ತು.

ಸರ್ಕಾರದ ಕರುಣೆ

೧೮೬೯ರಲ್ಲಿ ಸರ್ಕಾರಿ ಅಧಿಕಾರಿಗಳು ಮಂತ್ರಾಲೋಚನೆ ಮಾಡಿದರು. "ವಿದೇಶಿಯರ ಕಣ್ಣುಗಳಲ್ಲಿ ರಾಷ್ಟ್ರೀಯ ಅವಮಾನಕರವಾಗಿ ಕಾಣುವ" ಹಾಗೂ "ನಿರಂಕುಶ ಪ್ರಭುತ್ವದ ಆಳ್ವಿಕೆಯಲ್ಲಿ ಕಳಂಕ" ವಾಗಿರುವ ಈ ಅಸ್ಪೃಶ್ಯತೆಯ ಸಮಸ್ಯೆಯನ್ನು ಪರಿಹರಿಸುವುದು ಎಂತು?

ಜಪಾನನ್ನು ಆಧುನೀಕರಿಸುವ .ಹಂತ. ಅನೇಕ ಸುಧಾರಣೆಗಳು. ೧೮೭೧ರಲ್ಲಿ 'ಎಟಾ' "ವಿಮೋಚನಾ ಶಾಸನ" ಜಾರಿಗೆ. 'ಎಟಾ' ಜಾತಿಯನ್ನೇ ರದ್ದುಗೊಳಿಸಲಾಗಿದೆ ಎಂದು ಸಾರಲಾಯಿತು. ಹಳೆಯ ಜಾತಿ ವ್ಯವಸ್ಥೆ ಇಲ್ಲ ಎನ್ನಲಾಯಿತು. ಅಧಿಕೃತವಾಗಿ ಎಟಾಗಳು "ನವಪೌರರಾದರು". ಸರ್ಕಾರಿ ದೃಷ್ಟಿಯಲ್ಲಿ ಪ್ರಜೆಗಳಾದರು:

> **ಇದಾವ ನ್ಯಾಯ**
>
> ಜಪಾನಿ ನ್ಯಾಯಾಂಗ ಸಚಿವಾಲಯದ ಪ್ರಕಟಣೆ "Hand book of Japanese customs and Folk ways 1880ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ "ಎಟಾ"ಎಂದರೆ ಅಮಾನವರು; ಎಲ್ಲ ಜನರಿಗಿಂತ ತುಚ್ಛವಾದವರು. ಪ್ರಾಣಿಗಳನ್ನು ಹೋಲುವ ಮಂದಿ"ಎಂದು ಉಲ್ಲೇಖಿಸಲಾಗಿದೆ.

ಈ ಶಾಸನವನ್ನು ತರಲು ಅಸ್ಪೃಶ್ಯರೆನಿಸಿಕೊಂಡವರ ಬಗೆಗಿನ ಅನುಕಂಪೆಗಿಂತ, ಪ್ರಭುತ್ವದ ಸ್ವಾರ್ಥವೇ ಮುಖ್ಯವಾಗಿತ್ತು. ಅಂತರಾಷ್ಟ್ರೀಯ ವಲಯದಲ್ಲಿ ಮುಖವುಳಿಸಿಕೊಳ್ಳುವ ಪ್ರಯತ್ನ ಮೊದಲನೆಯದು. ಎರಡನೆಯದು ರಾಜಾದಾಯವನ್ನು ಹೆಚ್ಚಿಸಿಕೊಳ್ಳುವ ತಂತ್ರ. ಎಟಾ ಸಮುದಾಯಗಳ ಮಾಲೀಕತ್ವದಲ್ಲಿನ ಜಮೀನುಗಳು ಈ ಮೊದಲು 'ತೆರಿಗೆ ವಿನಾಯಿತಿ ಪಡೆದ' ಪ್ರದೇಶಗಳೆಂದು ಪರಿಗಣಿತವಾಗಿದ್ದವು. ಈ ಶಾಸನ ಜಾರಿಗೆ ಬಂದ ಮೇಲೆ ಅವೂ ನಿಯತ ತೆರಿಗೆ ಜಾಲಕ್ಕೆ ಒಳಗಾದವು.

ಶತ ಶತಮಾನಗಳಿಂದ ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟ ಸಾಮಾಜಿಕ ತಾರತಮ್ಯ ಧೋರಣೆಯನ್ನು ಶಾಸನದ ಮೂಲಕ ಸರಳವಾಗಿ ನಿರ್ಮೂಲಗೊಳಿಸಲು ಸಾಧ್ಯವೇ ? ವಾಸ್ತವವಾಗಿ ಪರಿಸ್ಥಿತಿ ಮೊದಲಿಗಿಂತ ಹೊಲಸಾಯಿತು. ಹೊಸ ಆಧುನಿಕ ನೀತಿಯಿಂದ ಕೆಲವು ಉದ್ಯಮಗಳ ಮೇಲಿನ ಏಕಸ್ವಾಮ್ಯವನ್ನು ಕಳೆದುಕೊಂಡರು. ಮೊದಲೇ ತುಳಿತಕ್ಕೆ ಒಳಗಾಗಿದ್ದ ಸಮುದಾಯವನ್ನು ಮತ್ತಷ್ಟು ಅಡಿಗೊತ್ತಲಾಯಿತು. ಬುರಾಕುಮಿನ್ ಹಾಗೂ ಮೇಲು ಜಾತಿಯವರ ನಡುವೆ ತೀವ್ರ ಬಿಕ್ಕಟ್ಟು, ವೈಷಮ್ಯ ತಲೆದೋರಿತು. ಎಟಾರನ್ನು ತಮ್ಮ ಸಮ ಎಂದು ಪರಿಗಣಿಸಲು ಸಿದ್ಧರಿಲ್ಲದ ನೆರೆಹೊರೆಯವರ ಅಸಮಾಧಾನ ಕಿಡಿಯಾಗಿದ್ದು ಆಗಾಗ ಭುಗ್ಗೆನ್ನುತ್ತಿತ್ತು. ಇದಕ್ಕೆ ಬಲಿಪಶುಗಳಾಗುತ್ತಿದ್ದವರು ಬುರಾಕುಮಿನ್‌ಗಳೇ. 'ಎಟಾ' ಗಳನ್ನು ನಿರ್ಮೂಲಗೊಳಿಸಬೇಕೆನ್ನುವ "ಎಟಾ ಬೇಟೆ"ಗಳು ಅಲ್ಲಲ್ಲಿ ಕಾಣಿಸಿಕೊಳ್ಳುತ್ತಲೇ ಇದ್ದವು. "ಮಿಮಸಾಕ ದೊಂಬಿ" ಇಂಥ ಘಟನೆಗಳಲ್ಲಿ ಒಂದು.

ಜಪಾನಿ ರೈತರಿಗೆ ಹೊಸ ಶಾಸನದಿಂದ ದಿಗಿಲು. ತಮ್ಮ ಜಮೀನುಗಳನ್ನು ಎಟಾಗಳು ಕಿತ್ತು

> ## ಮಿಮಸಾಕ ದೊಂಬಿ
>
> ೧೮೭೩ ಮೇ ೨೬, ಸರ್ಕಾರದ ವಿಮೋಚನ ಶಾಸನವನ್ನು ಒಪ್ಪದ, ಎಟಾಗಳನ್ನು ತನ ಸರಿಸಮವೆಂದು ಪರಿಗಣಿಸಲು ಒಲ್ಲದ ಒಕಯಾಕ ಪ್ರಾಂತ್ಯದ ಒಬ್ಬ ರೈತ ಗುಲ್ಲೆಬ್ಬಿಸಿದ. ಯಾವನೋ ಗುರುತರಿಯದ ವ್ಯಕ್ತಿಯೊಬ್ಬ, ಎಟಾ ಇರಬಹುದು, ಬಿಳಿಯುಡುಗೆ ಧರಿಸಿ ಅನುಮಾನಾಸ್ಪದವಾಗಿ ತಮ್ಮ ಕೇರಿಯಲ್ಲಿ ಸುತ್ತುತ್ತಿದ್ದಾನೆ ಅಂತ. ರೈತರು ಘೇರಾಯಿಸಿದರು. ರೈಫಲ್ ತಂದರು. ಈಟಿಗಳನ್ನು ಹಿಡಿದರು. ಊರಗೌಡನ ಮನೆಯನ್ನು ಸುತ್ತುವರೆದರು. ಅಪರಿಚಿತ ವ್ಯಕ್ತಿ ಆ ಮನೆಯೊಳಕ್ಕೆ ಹೋಗಿದ್ದಾನೆ, ನಮಗೆ ಒಪ್ಪಿಸು ಎಂದು ಗದ್ದಲ ಹಾಕಿದರು. ಇಲ್ಲವೆಂದರೂ ಕೇಳದೆ ಒಳನುಗ್ಗಿ ತಡಕಾಡಿದರು. ಯಾರೂ ಸಿಗದೆ ಕೋಪವೂ ಆರದೆ ಜನಜಂಗುಳಿ ಪಕ್ಕದ 'ಬುರಾಕು'ವಿಗೆ ನುಗ್ಗಿತು. ಎಟಾಗಳ ಹದಿನಾಲು ಮನೆಗಳನ್ನು ಧ್ವಂಸ ಮಾಡಿ ಬೆಂಕಿ ಹಾಕಿದರು. ಮುಂದಿನ ಬುರಾಕುವಿಗೆ ನುಗ್ಗಿ ಸಿಕ್ಕಿದ್ದನ್ನು ಪಾಳುಗೆಡವಿದರು. ಮಧ್ಯರಾತ್ರಿಯಾದರೂ ಬಿಡದೆ ಮತ್ತೆ ಮೂರು 'ಬುರಾಕು'ಗಳಿಗೆ ನುಗ್ಗಿ ಮನೆಗಳಿಗೆ ಕಿಚ್ಚು ಹಚ್ಚಿದರು. ಸುತ್ತಮುತ್ತಣ ಹಲವಾರು ಬುರಾಕುಗಳೂ ಧಾಳಿಗೀಡಾಗಿ ಬಸವಳಿದವು. ನಾಲ್ಕುದಿನ ಸತತವಾಗಿ ಧ್ವಂಸಕಾರ್ಯ ನಡೆಯಿತು. ಒಟ್ಟಾರೆ ೩೦೦ ಬುರಾಕು ಗುಡ್ಲುಗಳು ಧ್ವಂಸಗೊಂಡು, ೧೮ ಎಟಾಗಳು ಸತ್ತು ೧೧ ಮಂದಿಯ ಪರಿಸ್ಥಿತಿ ತೀವ್ರ ಚಿಂತಾಜನಕವಾಗುವಂತಾಯಿತು. ಸೈನ್ಯವೇ ಬಂದು ಪರಿಸ್ಥಿತಿಯನ್ನು ಹತೋಟಿಗೆ ತರಬೇಕಾಯಿತು. ಒಟ್ಟು ೨೬,೦೦೦ ಮೇಲುಜಾತಿಯ ರೈತರು ಈ ದಂಗೆಯಲ್ಲಿ ಪಾಲ್ಗೊಂಡಿದ್ದರು ಎಂದು ಅಂದಾಜು.

ಕೊಂಡಾರು ಎಂಬ ಭಯ. ತಾವು ಎಟಾಗಳ ಮಟ್ಟಕ್ಕೆ ಇಳಿಯಬೇಕಾಗಬಹುದೇ ಎಂಬ ಆತಂಕ. ಇದು ಗ್ರಾಮೀಣವಲಯಗಳಲ್ಲಿ ರೊಚ್ಚಿಗೆ ಕಾರಣ. ಹತ್ತು ವರ್ಷಗಳ ಅವಧಿಯಲ್ಲಿ ಸುಮಾರು ೨೦೦ ದೊಂಬಿಗಳಾದವು.

ಅಸ್ಪೃಶ್ಯತೆಯನ್ನು ಆಜ್ಞೆಯ ಮೂಲಕ ಕಳೆದುಕೊಂಡ ಎಟಾಗಳ ದೈನಂದಿನ ಜೀವನ ಪರಿವರ್ತನೆಯನ್ನೇನೂ ಕಾಣಲಿಲ್ಲ. ರೊಚ್ಚಿಗೆದ್ದ ನೆರೆಹೊರೆ ಮೇಲು ಜಾತಿಯವರ ಧಾಳಿಯ ಭಯ ನಿರಂತರ. ಸಾಮಾಜಿಕ ಎಲ್ಲ ಮಜಲುಗಳಲ್ಲಿಯೂ ತಾರತಮ್ಯ ಇದ್ದದ್ದೆ.

ಧರ್ಮಕಾರ್ಯಗಳಿಗೆ ಹಣ ಸಂಗ್ರಹ ಮಾಡುತ್ತಿದ್ದ ಬೌದ್ಧ ಸನ್ಯಾಸಿಯೊಬ್ಬ ಏನು ಹೇಳುತ್ತಿದ್ದ ಎಂದರೆ "ಕಸಕ್ಕೆ ಸಮಾನರಾದ ಎಟಾಗಳೇ ಹಣ ಕೊಡುತ್ತಿರುವಾಗ, ನಿಜವಾಗಿ ಮಾನವರಾದ ಇತರರು ಇನ್ನೂ ಹೆಚ್ಚು ಕೊಡಬೇಕು".

ಜಪಾನಿನ ಪಾರ್ಲಿಮೆಂಟಿನಲ್ಲಿ ತೆರಿಗೆ ಸಮಸ್ಯೆ ಹಾಗೂ ನೌಕಾದಳದ ವಿಸ್ತರಣೆ ಎಂಬ ಎರಡು ವಿಷಯಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಂಡಾಗ ಒಬ್ಬ ಪಾರ್ಲಿಮೆಂಟ್ ಸದಸ್ಯ ನೀಡಿದ ರೂಪಕ "ಈ ಎರಡರ ಚರ್ಚೆಯನ್ನು ಒಟ್ಟಿಗೆ ಮಾಡುವುದು ಶ್ರೀಮಂತ ಕುಟುಂಬದ ಯುವಕ ಹಾಗೂ ಎಟಾ ಹುಡುಗಿ ಕೈಕೈ ಹಿಡಿದುಕೊಂಡಷ್ಟೇ ಅಸಹಜ ವಿಚಿತ್ರ".

ಸಾವಿರಾರು ವರ್ಷಗಳ ಹಿಂದೆ, ಅಧಿಕಾರ ಸೂತ್ರಗಳನ್ನು ಹಿಡಿದಿದ್ದ ಒಂದು ಗುಂಪು, ಶ್ರೇಣಿ ವ್ಯವಸ್ಥೆಯಲ್ಲಿ ತಮ್ಮ ಸ್ಥಾನವನ್ನು ಭದ್ರಗೊಳಿಸಲು ಸಾಮಾಜಿಕ ಸ್ತರೀಕರಣ ಮಾಡಿಕೊಂಡಾಗಲೇ ಬುರಾಕುಮಿನ್‌ಗಳ ಪೂರ್ವಜರ ವಿರುದ್ಧ ದಬ್ಬಾಳಿಕೆ ಆರಂಭಗೊಂಡಿತ್ತು. ಇಂದಿಗೂ ಬಹುಸಂಖ್ಯಾತ ಮಂದಿಯಲ್ಲಿ ಬುರಾಕುಮಿನ್‌ಗಳು ತಮಗಿಂತ ಭಿನ್ನ ಎಂಬ ಮನೋಧರ್ಮ ಅಳಿಯಲಿಲ್ಲ.

ಟೊಕುಗಾವ ಆಳ್ವಿಕೆಯ ಕಾಲದಲ್ಲಿ (ಹದಿನೇಳನೆಯ ಶತಮಾನದಲ್ಲಿ) ಜಾತಿವ್ಯವಸ್ಥೆ ಬಿಗಿಯಾಗಿ, ಬುರಾಕುಮಿನ್‌ಗಳು ಅತ್ಯಂತ ಕೆಳಸ್ತರದಲ್ಲಿ ಸಂಪೂರ್ಣ ಅಸ್ಪೃಶ್ಯರಾಗಿ ಪರಿಗಣಿತರಾದರು. ಆಳುತ್ತಿದ್ದ ಯೋಧ-ರಾಜವಂಶಜರು ತಮ್ಮ ಹಾಗೂ ಬಹುಸಂಖ್ಯಾತ ಜನರ ನಡುವೆ ಸಾಮಾಜಿಕ ದೂರವನ್ನು ಸೃಷ್ಟಿಸಿಕೊಂಡರು. ವೃತ್ತಿಯ ಆಧಾರದ ಮೇಲೆ ವರ್ಗವ್ಯವಸ್ಥೆ. ಯೋಧ ವರ್ಗಕ್ಕೆ (ಸಮುರಾಯ್) ಶ್ರೇಣಿಯಲ್ಲಿ ಮೊದಲ ಸ್ಥಾನ. ಆಹಾರ ಧಾನ್ಯಗಳನ್ನು ಬೆಳೆವ, ರಾಜಾದಾಯ ನೀಡುವ ರೈತರಿಗೆ ಎರಡನೆಯ ಸ್ಥಾನ. ಯೋಧರಿಗೆ ಅಗತ್ಯವಾದ ಸಲಕರಣೆಗಳನ್ನು ಒದಗಿಸುವ ಕುಶಲ ಕಸಬುದಾರರಿಗೆ ಮೂರನೆ ಸ್ಥಾನ. ಅನುತ್ಪಾದಕರೆಂದು ಪರಿಗಣಿತರಾಗಿದ್ದ ವರ್ತಕ ವರ್ಗಕ್ಕೆ ನಾಲ್ಕನೆಯ ಸ್ಥಾನ. ಈ ವರ್ಗ ವ್ಯವಸ್ಥೆಯ ವಲಯದಾಚೆಗೆ ಅತ್ಯಂತ ಕೆಳಸ್ತರದಲ್ಲಿ ಎಟಾಗಳು ಹಾಗೂ ಹೀನಿನ್‌ಗಳು. ಇಂಥ ಕಟ್ಟುನಿಟ್ಟಾದ ವರ್ಗವ್ಯವಸ್ಥೆಯನ್ನು ರೂಢಿಸಿದ್ದರಿಂದ ಜನಸಮುದಾಯದಲ್ಲಿ ಸ್ಪಷ್ಟ ಬಿರುಕುಗಳಿದ್ದು ಒಗ್ಗಟ್ಟಿಗೆ ಅನುಕೂಲವಾಗದೆ ಟೊಕುಗಾವ ವಂಶದ ಆಳ್ವಿಕೆ ನಿರಾತಂಕವಾಗಿ ೨೫೦ ವರ್ಷಗಳಕಾಲ ಮುಂದುವರಿಯಿತು.

ಟೋಕುಗಾವ ಸರ್ವಾಧಿಕಾರ ಅವಧಿಯಲ್ಲಿ ಬುರಾಕುಮಿನ್‌ಗಳ ಜೀವನವನ್ನು ನಿಯಂತ್ರಿಸುವ ಅನೇಕ ಕಪ್ಪು ಕಾಯಿದೆಗಳಾದವು.

ವಿವಾಹ : ಬುರಾಕುಮಿನ್ ಅಲ್ಪಸಂಖ್ಯಾತ ಸಮೂಹದೊಳಗೇ ಅವರು ಮದುವೆಯಾಗಬೇಕು. ಅನ್ಯರನ್ನು ಮದುವೆಯಾದರೆ ಬಲವಂತವಾಗಿ ವಿಚ್ಛೇದನವನ್ನು ಮಾಡಲಾಗುವುದು. ಶಿಕ್ಷೆಯನ್ನು ವಿಧಿಸಲಾಗುವುದು.

ವಸತಿ : ಬುರಾಕುಮಿನ್‌ಗಳು ನಿಯೋಜಿತ ಗೆಟೋ ಸಮುದಾಯಗಳಲ್ಲಿಯೇ ವಾಸಿಸಬೇಕು. ನಗರದ ಕೆಲವೆಡೆಗಳಲ್ಲಿ ವಾಸಿಸುವ ಬುರಾಕುಮಿನ್ ಕುಟುಂಬಗಳು ತಮ್ಮ ಮನೆಯ ಮುಂಬಾಗಿಲ ಬಳಿ ಪ್ರಾಣಿಯ ಚರ್ಮದ ಪಟ್ಟಿಯನ್ನು ನೇತುಹಾಕಿಕೊಂಡು ತಾವು ಬುರಾಕುಮಿನ್‌ಗಳೆಂದು ಘೋಷಿಸಿಕೊಳ್ಳಬೇಕು.

ಉಡುಗೆ : ಬಟ್ಟೆಯ ಪಟ್ಟಿಗಳನ್ನಾಗಲೀ ಬೆಲ್ಟ್‌ಗಳನ್ನಾಗಲೀ ಅವರು ಹಾಕುವಂತಿಲ್ಲ. ನಾರಿನ ಹುರಿಗಳನ್ನೇ ಸೊಂಟಕ್ಕೆ ಕಟ್ಟಬೇಕು. ತಲೆಗೂದಲಿಗೂ ನಾರುದಾರವನ್ನು ಕಟ್ಟಬೇಕು. ಬಣ್ಣದ ವಿನ್ಯಾಸಗಳಬಟ್ಟೆಗಳನ್ನು ತೊಡುವಂತಿಲ್ಲ.

ಪ್ರಾಣಿ ಸೋಜಿಗ

೧೯೨೦ರ ಆಧುನಿಕ ಎಟಾ ವಿಮೋಚನ ಚಳವಳಿಯ ನಾಯಕರಲ್ಲಿ ಒಬ್ಬ–ಮಿಯೊಷಿ. ಈತ ೧೮೮೦ರ ಸುಮಾರಿನಲ್ಲಿ ಶಾಲಾಬಾಲಕ. ಅಸ್ಪೃಶ್ಯ, ಎಟಾ, ಬರಾಕುಮಿನ್.

"೧೮೮೬ರಲ್ಲಿ ನಾನು ಪ್ರೌಢಶಾಲೆಯನ್ನು ಸೇರಿದಾಗ, ಆ ಸುತ್ತಮುತ್ತಣ ಪ್ರಾಂತ್ಯಕ್ಕೆ ನಾನೊಬ್ಬನೆ ಎಟಾ, ಮೊದಲ ವಿದ್ಯಾರ್ಥಿ. ಎಲ್ಲರಿಗೂ ನನ್ನ ಬಗ್ಗೆ ಕುತೂಹಲ /ಜೊತೆಗೆ ಮುಜುಗರ ....

ತರಗತಿಯ ಎಲ್ಲ ಮಕ್ಕಳ ಹಿಂದೆ ದೂರದಲ್ಲಿ ನಾನೊಬ್ಬನೇ ಒಂಟಿಯಾಗಿ ಕೂರಬೇಕಿತ್ತು. ಯಾರೂ ನನ್ನೊಂದಿಗೆ ಮಾತಾಡುತ್ತಿರಲಿಲ್ಲ. ನನ್ನ ಜೊತೆ ಕೂರಲು ಇಷ್ಟಪಡುತ್ತಿರಲಿಲ್ಲ........ ಆರೋಗ್ಯ ವಿಜ್ಞಾನ ಪಾಠ ಮಾಡುವ ಮೇಷ್ಟ್ರು ನನ್ನನ್ನು ಕೇಳಿದ ಪ್ರಶ್ನೆ ಎಂದರೆ–'ನಿಮ್ಮ ಜನಗಳಿಗೆ ಒಂದೇ ಕಾಲಕ್ಕೆ ಉಚ್ಚೆ ಹೊಯ್ಯಲು, ಎರಡ ಮಾಡಲು ಆಗುವುದಿಲ್ಲವಂತೆ ಹೌದೆ?"

ಈ ಬಗೆಯ ಪ್ರಶ್ನೆ ಹುಟ್ಟಲು ಅಲ್ಲಿ ಪ್ರಚಲಿತವಿರುವ ಜನಪದ ನಂಬಿಕೆಗಳೇ ಕಾರಣ. ಬುರಾಕುಮಿನ್‌ಗಳನ್ನು ಪ್ರಾಣಿಗಳೊಂದಿಗೆ ಸಮೀಕರಿಸುವ ಕಲ್ಪನೆಗಳು ಹಲವು.

"ಅವರಿಗೆ ಒಂದು ಪಕ್ಕೆ ಮೂಳೆಯೇ ಇರುವುದಿಲ್ಲ".

"ನಾಯಿ ಮೂಳೆಯೊಂದು ಅವರ ದೇಹದಲ್ಲಿದೆ."

"ಅವರ ಜನನೇಂದ್ರಿಯಗಳು ವಿಕೃತವಾಗಿರುತ್ತವೆ."

"ಅವರ ಮಲ ವಿಸರ್ಜನೆ, ಮೂತ್ರ ವಿಸರ್ಜನೆಗಳು ದೋಷಪೂರ್ಣ".

ಅವರು ಪ್ರಾಣಿಗಳಾದ್ದರಿಂದ ಬರಿಗಾಲಿನಲ್ಲಿ ನಡೆದಾಗ ಅವರ ಪಾದಗಳಿಗೆ ಧೂಳು ಹತ್ತುವುದಿಲ್ಲ".

ಏಳು ಜೀವ=ಒಂದು ಜೀವ

೧೮೫೯ರ ಗಮನಾರ್ಹ ನ್ಯಾಯತೀರ್ಪು ಬುರಾಕುಮಿನ್ ಹಾಗೂ ಇತರ ಜನರ ನಡುವಣ ಜಗಳ. ಒಬ್ಬ ಎಟಾ ಯುವಕ ಸಾವಿಗೀಡಾದ. ಈ ಪ್ರಕರಣ ನ್ಯಾಯಾಲಯಕ್ಕೆ ಹೋಯಿತು. ವಿಚಾರಣೆ ನಡೆಸಿದ ನ್ಯಾಯಾಧೀಶ ಅತ್ಯಂತ ಪ್ರಸಿದ್ಧವೂ ಆಗಿನ ಜನ ಧೋರಣೆಯ ಪ್ರತೀಕವೂ ಆದ ತೀರ್ಪು ನೀಡಿದ. "ಒಬ್ಬ ಎಟಾ ವ್ಯಕ್ತಿ ಇತರ ಸಾಮಾನ್ಯ ವ್ಯಕ್ತಿಯ $1/7$ ಭಾಗಕ್ಕೆ ಸಮ.ಆದ್ದರಿಂದ ಸಾವಿಗೀಡಾದ ಎಟಾನನ್ನು ಕೊಂದ ತಪ್ಪಿತಸ್ಥನಿಗೆ ಶಿಕ್ಷೆಯಾಗಬೇಕಾದರೆ ಆತ ಇನ್ನೂ ಆರು ಮಂದಿ ಎಟಾಗಳನ್ನು ಕೊಲ್ಲಬೇಕು."

ಬುರಾಕುಮಿನ್‌ಗಳ ವೃತ್ತಿ—1971

ವೃತ್ತಿ	ವೃತ್ತಿಯಲ್ಲಿನ ಬುರಾಕುಮಿನ್	ಶೇಕಡಾವಾರು
ಬೇಸಾಯ	1,83,240	25.93
ಕಾರ್ಖಾನೆ	1,61,051	22.79
ಕಟ್ಟಡ ಕೆಲಸ	1,07,722	15.23
ಮಾರುವವರು	82,429	11.65
ಸೇವಾ ಕೆಲಸ	64,241	9.08
ಸಾರಿಗೆ	37,191	5.25
ಸರ್ಕಾರಿ ಉದ್ಯೋಗ	26,852	3.80
ವಿದ್ಯುತ್, ಗ್ಯಾಸ್ ಹಾಗೂ ಜಲೋಪಯೋಗಿ	7665	1.08
ಮೀನುಗಾರಿಕೆ	7647	1.08
ಸಾಲ ಮತ್ತು ಇನ್‌ಷೂರೆನ್ಸ್	5579	0.78
ಗಣಿಗಾರಿಕೆ	3697	0.52
ಅರಣ್ಯೋದ್ಯಮ	3131	0.44
ಸ್ಥಿರಾಸ್ತಿಮಾರಾಟ	1798	0.25
ಇತರೆ	15,019	2.12
	707,262	100.00

ಬರಿಗಾಲಿನಲ್ಲಿ ನಡೆಯಬೇಕು. ಛತ್ರಿ ಹಿಡಿಯಬಾರದು.

ವರ್ತನೆ : ಇತರ ಪೌರರೊಂದಿಗೆ ಸ್ವಚ್ಛಂದವಾಗಿ ಬೆರೆಯುವಂತಿಲ್ಲ. ಇತರರ ಮನೆಗೆ ಹೋದರೆ ಹೊಸಲು ದಾಟಕೂಡದು. ಸಂಜೆಯಾಗುವುದರೊಳಗೆ ಮನೆಸೇರಿಕೊಳ್ಳಬೇಕು. ಬುರಾಕುಮಿನ್ ಮುಖ್ಯಸ್ಥನೊಬ್ಬನಿಗೆ ಮಾತ್ರ ಇರುಳು ಹೊರ ಓಡಾಡುವ ಅವಕಾಶವಿದೆ; ಅವನೂ ರಾತ್ರಿಯ ವೇಳೆ ಓಡಾಡುವ ವಿಶೇಷವಾದ ಬಗೆಯ ಲಾಟೀನು ಹಿಡಿದಿರತಕ್ಕದ್ದು.

ವೃತ್ತಿ : ಹೀನವಾದುವೆಂದು ಪರಿಗಣಿತವಾದ ವೃತ್ತಿಗಳು ಮಾತ್ರ.

ಕೊನೆಗೆ ಈ ಆಳ್ವಿಕೆ ಕೊನೆಗೊಂಡು ಮೈಜಿ ರಾಜವಂಶದ ಯುಗ (೧೮೬೮-೧೯೧೧) ಆರಂಭವಾದಾಗ ಜಪಾನನ್ನು ಆಧುನೀಕರಿಸುವ ಪ್ರಯತ್ನಗಳು ಮೊದಲಾದವು. ೧೮೭೧ರಲ್ಲಿ ವಿಮೋಚನಾ ಶಾಸನ ಜಾರಿಗೆ ಬಂತು. ಔದ್ಯೋಗಿಕೀಕರಣ, ನಗರೀಕರಣ ಹೆಚ್ಚಿದಂತೆ ಬಂಡವಾಳಶಾಹಿಗಳು, ಅಧಿಕಾರಶಾಹಿಗಳು ಹಾಗು ಸೈನಿಕಶಾಹಿಗಳು ತಮ್ಮ ಹಿತಾಶಕ್ತಿಗಳನ್ನು ಭದ್ರಪಡಿಸಿಕೊಳುತ್ತಾ ಹೋದರು. ಬುರಾಕುಮಿನ್‌ಗಳು ಜಪಾನ್ ಸಮಾಜದ ತಳದಲ್ಲಿಯೇ ತಳಊರಿದ್ದರು. ವಿದ್ಯಾಭ್ಯಾಸ ಸೌಕರ್ಯವಿಲ್ಲದ್ದರಿಂದ, ವೃತ್ತಿ ನೀಡುವಾಗ ತಾರತಮ್ಯ ಧೋರಣೆಗೆ ಒಳಗಾಗುತ್ತಿದ್ದುದರಿಂದ ಬುರಾಕುಮಿನ್‌ಗಳು ಇತರರು ಮಾಡಲೊಲ್ಲದಂಥ ಕೆಲಸಗಳನ್ನು ಅತ್ಯಂತ ಕಡಿಮೆ ಕೂಲಿಗೆ ಮಾಡಬೇಕಾದದ್ದು ಅನಿವಾರ್ಯವಾಗಿತ್ತು. ಬಹುತೇಕ ಬುರಾಕುಮಿನ್‌ಗಳು ದಾರಿದ್ರ್ಯ ಜಗತ್ತಿನಲ್ಲಿಯೇ ಉಳಿದಿದ್ದರು. ಈ ಬಗೆಯ ಅಸ್ತಿತ್ವ ದುಸ್ಥಿತಿಯ ಸಂಕಲೆಯನ್ನು ಮುರಿಯಲು ಅವರಿಗೆ ಅವಕಾಶವೇ ಇರಲಿಲ್ಲ.

ಸಾಮಾಜಿಕವಾಗಿ ಬಹಿಷ್ಕೃತರಾದ ಈ ಅಸ್ಪೃಶ್ಯ ಜನ ಒಂದಾಗುವ ಪ್ರಯತ್ನಮಾಡಿ ೧೯೦೭ರಲ್ಲಿ ಪ್ರಥಮ ಬಾರಿಗೆ ರಾಷ್ಟ್ರೀಯ ಸಂಘಟನೆಯೊಂದನ್ನು ರೂಪಿಸಿಕೊಂಡರು. ತಮ್ಮ ಜನಗಳ ನೀತಿ, ವರ್ತನೆ, ನೈರ್ಮಲ್ಯ ಭಾವನೆಗಳನ್ನು ಉತ್ತಮಪಡಿಸುವ ಸ್ಥಾನಮಾನಗಳನ್ನು ಹೆಚ್ಚಿಸುವ ಗುರಿ ಈ ಸಂಘಟನೆಯದು. ತಮ್ಮ ಬಗೆಗಿನ ಸಮಾಜದ ಕೆಂಡಗಣ್ಣನ್ನು ಹಸಿರು ಮಾಡುವ ಪ್ರಯತ್ನವನ್ನು ಇದು ಮಾಡಲಿಲ್ಲ.

ಇಪ್ಪತ್ತು ವರ್ಷಗಳ ನಂತರ ಹೆಚ್ಚು ಬಲವತ್ತರವಾದ ಸಮಾನತಾ ಸಂಘ (ಸುಯಿಹೈಷಾ] ಜನ್ಮತಾಳಿತು. ತಾರತಮ್ಯವನ್ನು ಭೇದದೃಷ್ಟಿಯನ್ನು ಅಳಿಸುವುದು ಇದರ ಧ್ಯೇಯ. ೧೯೨೨ ಮಾರ್ಚಿ ೩ರಲ್ಲಿ ಪ್ರಥಮ ಸಮ್ಮೇಳನ. ಸುಮಾರು ೨೦೦೦ ಪ್ರತಿನಿಧಿಗಳ ಭಾಗವಹಿಸುವಿಕೆ. ಮೂರು ಅಂಶಗಳ ಘೋಷಣೆ.

೧. ನಾವು ಬುರಾಕುಮಿನ್‌ಗಳು, ನಮ್ಮ ಸ್ವಂತ ಕ್ರಿಯೆಯಿಂದಲೇ ಪೂರ್ಣ ವಿಮೋಚನೆಯನ್ನು ಪಡೆಯಬೇಕು.

೨. ನಾವು ಬುರಾಕುಮಿನ್‌ಗಳು, ಆರ್ಥಿಕ ಹಾಗೂ ವೃತ್ತಿಯ ಸ್ವಾತಂತ್ರ್ಯವನ್ನು ಸಮಾಜದಿಂದ ಆಗ್ರಹ ಪೂರ್ವಕವಾಗಿ ಬೇಡಿ, ಪಡೆಯಬೇಕು.

೩. ನಾವು ಬುರಾಕುಮಿನ್‌ಗಳು, ಮಾನವೀಯ ಆತ್ಮಗೌರವದ ಪ್ರಜ್ಞೆಯುಳ್ಳವರಾಗಿರಬೇಕು. ಮಾನವೀಯ ಮೌಲ್ಯಗಳ ಪೂರ್ಣ ಸಾಧನೆಯತ್ತ ಗಮನ ಹರಿಸಬೇಕು.

ಈ ಒಕ್ಕೂಟದ ಲಾಂಛನ ಧ್ವಜವನ್ನು ಏರಿಸಲಾಯಿತು. "ರಕ್ತವರ್ಣದ ಮುಳ್ಳುಕಿರೀಟ, ಅದಕ್ಕೆ ಕಪ್ಪು ಹಿನ್ನೆಲೆ."

ರಾಷ್ಟ್ರದ ಎಲ್ಲೆಡೆಯ ಬುರಾಕುಗಳ ಮುಖಂಡರು ತಮ್ಮ ತಮ್ಮ ಪ್ರದೇಶಗಳಲ್ಲಿ ಒಂದೊಂದು ಶಾಖೆಯನ್ನು ಆರಂಭಿಸಿದರು. ರಾಷ್ಟ್ರಮಟ್ಟದ ಚಳವಳಿಯನ್ನು ಈ ಸಮಾನತಾ ಸಂಘ ಕೈಗೊಂಡಿತು. ವೈವಾಹಿಕ ಹಾಗೂ ವೃತ್ತಿಯ ತಾರತಮ್ಯಗಳು ಕಂಡುಬಂದ ಪ್ರಕರಣಗಳನ್ನು ಈ ಸಮಾನತಾ ಸಂಘ ಕೈಗೆತ್ತಿಕೊಂಡು ಹೋರಾಡುತ್ತಿತ್ತು. ಬುರಾಕುಮಿನ್‌ಗಳ ವಿರುದ್ಧ ಮೌಖಿಕವಾಗಿ ಅಥವಾ ವರ್ತನೆಯ ಮೂಲಕ ಅವಮಾನ ಮಾಡುವ ವ್ಯಕ್ತಿಗಳನ್ನು ಸಾರ್ವಜನಿಕವಾಗಿ ಖಂಡಿಸುವ, ತಪ್ಪೊಪ್ಪಿಗೆ ಪಡೆಯುವ ವಿಧಾನವನ್ನು ಅತ್ಯಂತ ದಕ್ಷವಾಗಿ ರೂಪಿಸಿತ್ತು.

ಬುರಾಕು ಗೆಟೊಗಳ ಜನಗಣತಿ

ವರ್ಷ	ಗೆಟೊಗಳ ಸಂಖ್ಯೆ	ಬುರಾಕುಮಿನ್ ಜನಸಂಖ್ಯೆ
1971	3972	10,48,566
1967	3545	10,68,302
1963	4160	11,13,053
1958	4133	12,20,157
1935	5365	9,99,687
1921	4853	8,29,773

ಎರಡನೆ ಮಹಾಯುದ್ಧಾನಂತರ ಬುರಾಕು ವಿಮೋಚನ ಚಳವಳಿ ಪುನಶ್ಚೇತನಗೊಂಡು ಸಮಾನತಾ ಸಂಘವೇ 'ಬುರಾಕು ವಿಮೋಚನಾ ದಳ' [ಬುರಾಕು ಕೈಹೊ ಡೊಮೈ] ಎಂಬ ಹೆಸರಿನಿಂದ ಹೋರಾಟವನ್ನು ಮುಂದುವರಿಸಿತು. ತಾರತಮ್ಯ ಧೋರಣೆಯ ಸಂಸ್ಥೆಗಳನ್ನು ಪುನರ್‍ರೂಪಿಸುವತ್ತ, ಗೆಟೋ ನಿವಾಸಿಗಳ ಜೀವನಸ್ಥಿತಿಯನ್ನು ಸುಧಾರಿಸುವ ಶೈಕ್ಷಣಿಕ, ವೃತ್ತೀಯ, ವಸತಿ ಸಂಬಂಧ ಕಾರ್ಯಗಳನ್ನು ಕೈಗೊಳ್ಳುವತ್ತ ಇದು ಹೆಚ್ಚು ಗಮನ ನೀಡಿತು. ಈ ಚಳವಳಿಯಿಂದ ಬುರಾಕುಮಿನ್‍ಗಳಿಗೆ ಆತ್ಮಗೌರವ, ಮೂಡತೊಡಗಿತು. ತಾವು ಮಾನವರೆಂಬ ಭಾವನೆ ಗಟ್ಟಿಯಾಗತೊಡಗಿತು. ಈ ಚಳವಳಿಯ ಸಲವಾಗಿ ರಾಷ್ಟ್ರೀಯ ಸರ್ಕಾರ ೧೯೬೫ರಲ್ಲಿ ಒಂದು ಸಮಿತಿಯನ್ನು ರೂಪಿಸಿತು. ಈ ಸಮಿತಿಯ ಅಧ್ಯಯನದ ಶಿಫಾರಸುಗಳ ಮೇಲೆ ಸರ್ಕಾರ ಬುರಾಕುಮಿನ್‍ಗಳಿಗೂ ಸಮಾನ ಅವಕಾಶ ನೀಡುವ ನೀತಿಯನ್ನು ೧೯೬೯ರಲ್ಲಿ ಜಾರಿಗೆ ತಂದಿತು. ಹತ್ತು ವರ್ಷಗಳ ಅವಧಿಯಲ್ಲಿ ಬುರಾಕುಮಿನ್‍ಗಳ ವಿರುದ್ಧವಿರುವ ಎಲ್ಲ ಬಗೆಯ ತಾರತಮ್ಯಗಳನ್ನು ಅಳಿಸಿ ಹಾಕುವುದು ಈ ನೀತಿಯ ಗುರಿ. ಬುರಾಕುಮಿನ್ ಸಮುದಾಯಗಳ ಏಳಿಗೆಯಲ್ಲಿ ಗಮನಾರ್ಹ ಪ್ರಗತಿ ಸಾಧಿತವಾಗಿದ್ದರೂ ಗೆಟೊಗಳ ಪರಿಸ್ಥಿತಿ ಇನ್ನೂ ಉತ್ತಮಗೊಂಡಿಲ್ಲ. ತಾರತಮ್ಯ ಹಾಗೂ ವರ್ಗದ್ವೇಷಕ್ಕೆ ಹಿಂದೆ ಇದ್ದಷ್ಟು ಕಾವು ಈಗ ಇಲ್ಲದಿದ್ದರೂ ಜನಸಮುದಾಯದ ಬಹುತೇಕ ಮಂದಿಯಲ್ಲಿ ಪೂರ್ವಾಗ್ರಹ ಹಾಗೂ ತಾರತಮ್ಯ ಭಾವ ಇನ್ನೂ ಜೀವಂತವಾಗಿಯೇ ಇದೆ ●

ದುರಂತ

ಇತ್ತೀಚೆಗೆ ಒಸಾಕ ನಗರದ ಮಧ್ಯದ ವಸತಿ ಬಡಾವಣೆಯಲ್ಲಿ ನಿವಾಸಿಯಾಗಿದ್ದ ೨೧ ವರ್ಷದ ಯುವತಿ ಆತ್ಮಹತ್ಯೆ ಮಾಡಿಕೊಂಡಳು. ಅವಳು ಶಿಕೊಕಪಟ್ಟಣದಿಂದ ಉದ್ಯೋಗಾರ್ಥಿಯಾಗಿ ಬಂದು ನಾಲ್ಕು ವರ್ಷಗಳಾಗಿದ್ದವು. ತನ್ನ ಸಹೋದ್ಯೋಗಿ ಯುವಕನನ್ನೇ ಪ್ರೇಮಿಸಿ ಅವನೊಂದಿಗೆ ಒಂದೇ ಮನೆಯಲ್ಲಿ ವಾಸಿಸುತ್ತಿದ್ದಳು. ಆ ತರುಣ ತನ್ನ ತಾಯಿಯೊಡನೆ ತಾನು ಇವಳನ್ನೇ ಮದುವೆಯಾಗುವ ವಿಚಾರವನ್ನು ಪ್ರಸ್ತಾಪಿಸಿದ. ತನ್ನ ಸೊಸೆಯಾಗಿ ಬರುವವಳು ಬುರಾಕು ಕುಟುಂಬದಿಂದ ಬಂದವಳು ಎಂಬುದನ್ನು ಪತ್ತೆಹಚ್ಚಿದ ತಾಯಿ ಈ ಮದುವೆಗೆ ಬಲವಾದ ವಿರೋಧವನ್ನು ವ್ಯಕ್ತಪಡಿಸಿದಳು. ಇದನ್ನು ಅರಿತ ಯುವತಿ ಆತ್ಮಹತ್ಯೆ ಮಾಡಿಕೊಂಡಳು. ಅವಳು ಬರೆದಿಟ್ಟ ಪತ್ರ : "ನಾನು ಬುರಾಕು ಕುಟುಂಬದಿಂದ ಬಂದವಳು ನಿಜ. ನನ್ನ ಜೀವನದುದ್ದಕ್ಕೂ ಇದನ್ನು ರಹಸ್ಯವಾಗಿಡಬೇಕು ಎಂದು ಬಯಸಿದ್ದೆ, ಆಗಲಿಲ್ಲ. ಒಳ್ಳೆಯ ಕುಟುಂಬದ ಒಳ್ಳೆಯ ಹುಡುಗಿಯನ್ನು ನೀನು ಮದುವೆಯಾಗು, ಅವಳು ನಿನ್ನ ತಾಯಿಗೂ ಒಪ್ಪಿಗೆಯಾಗಲಿ ಎಂದು ಹಾರೈಸುತ್ತೇನೆ".

ಈ ನತದೃಷ್ಟ ಹೆಣ್ಣು ತನ್ನ ಹಿನ್ನೆಲೆಯನ್ನು ತಾನು ಪ್ರೇಮಿಸಿದವನಿಗೆ ಹೇಳಲು ಹಿಂಜರಿದಿದ್ದಳು. ಅದು ರಟ್ಟಾದೊಡನೆ ಪರಿಣಾಮ ದುರಂತ. ಇಂಥ ದುರಂತಗಳು ಸರ್ವೇ ಸಾಮಾನ್ಯ.

ಮುರಿದ ಕಟ್ಟಳೆ

ಜಪಾನಿನ ಕಾದಂಬರಿಕಾರ ಷಿಮಜಾಕಿ ಟೊಸೊನ್ ತನ್ನ 'ಹಕಾಯ್' ಕಾದಂಬರಿಯನ್ನು ಬರೆದದ್ದು ೧೯೦೬ರಲ್ಲಿ. ಹಕಾಯ್ ಎಂದರೆ broken commandment–'ಮುರಿದ ಕಟ್ಟಳೆ' ಪ್ರಕಟವಾದೊಡನೆ ಸಾಹಿತ್ಯ ಕೋಲಾಹಲವನ್ನುಂಟುಮಾಡಿತು. ಅಸ್ಪೃಶ್ಯತೆಯ ವಸ್ತುವನ್ನು ಆಧರಿಸಿ ಬಂದ ಪ್ರಥಮ ಕಾದಂಬರಿ ಅದಾಗಿದ್ದು, ಒಂದೇ ವರ್ಷದಲ್ಲಿ ಐದು ಮುದ್ರಣಗಳನ್ನು ಕಂಡಿತು. ಇನ್ನೂ ಮರು ಮುದ್ರಣಗಳನ್ನು ಕಾಣುತ್ತಲೇ ಇದೆ.

ಜಪಾನನ್ನು ಅಸ್ಪೃಶ್ಯ ಎಟಾ ವರ್ಗಕ್ಕೆ ಸೇರಿದ ವ್ಯಕ್ತಿಯೊಬ್ಬ ತನ್ನ ಮೂಲವನ್ನು ಮರೆಮಾಚುತ್ತ ಶಾಲಾ ಅಧ್ಯಾಪಕನಾಗಿ ಪ್ರತಿಷ್ಠಿತ ಸ್ಥಾನ ಗಳಿಸಿಕೊಳ್ಳುತ್ತಾನೆ. ತನ್ನ ಬಗ್ಗೆಯ ಸತ್ಯವನ್ನು ಗುಟ್ಟುಮಾಡುವ ಅವನಿಗೆ ಸದಾ ಉದ್ವೇಗ. ಆದರೆ ತನ್ನ ತಂದೆಯ ಕಟ್ಟಳೆಯನ್ನು ಮುರಿಯಲಾರ. ಸುಳ್ಳನ್ನು ಬದುಕುವ ಪಾಡು ಅಸಹನೀಯ. ತನ್ನ ಜನರ ದುಸ್ಥಿತಿ, ಅವಮಾನದ ಬಾಳನ್ನು ಕಂಡು ಆಕ್ರೋಶ.

ಶತಶತಮಾನಗಳ ದಬ್ಬಾಳಿಕೆಗೆ ತುತ್ತಾದ ಎಟಾ ಜನರ ಪರವಾಗಿ ನಿರ್ಭಯದಿಂದ ಹೋರಾಟ ಮಾಡುತ್ತಿದ್ದ ದಲಿತ ನಾಯಕನೊಬ್ಬನ ಸಂಗ ಇವನಿಗೆ ದೊರಕಿತು. ಇವನ ಮನದ ತುಯ್ತಕ್ಕೆ ಇಂಬು ದೊರಕಿದಂತಾಯಿತು. ಹತ್ತಿಕ್ಕಿದ ಆಕ್ರೋಶ ಸ್ಫೋಟವಾಯಿತು. ತನ್ನ ತಂದೆಯ ಕಟ್ಟಳೆಯನ್ನು ಮುರಿದು ತನ್ನ ಮೂಲವನ್ನು ಘೋಷಿಸಿಕೊಳ್ಳುತ್ತಾನೆ. ಈ ನಿಲುವಿನಿಂದ ಉಂಟಾಗಬಹುದಾದ ಎಲ್ಲ ಪರಿಣಾಮಗಳಿಗೆ, ತುತ್ತಾಗಬಹುದಾದ ಅವಮಾನಗಳಿಗೆ, ತಲೆಗೊಡಲು ಸಿದ್ಧನಾಗುತ್ತಾನೆ.

ಒಳ ಜಾತಿ ತಡಿಕೆ ಮುರಿದ ಸರಳ ಮದುವೆ

ಹಸಿವು ಅಸ್ಪೃಶ್ಯತೆಯಿಂದ ಬೆಂದ ಕೋಲಾರದ ಹಾರೋಹಳ್ಳಿ ಜೂನ್ 10 ರಂದು ಸಂಭ್ರಮ ತುಂಬಿಕೊಂಡು ನಿಂತಿತ್ತು. ಯಾಕೆಂದರೆ ಅಂದು ಅಸ್ಪೃಶ್ಯರ ಒಳಗಿನ ಹೊಲೆ–ಮಾದಿಗ ಒಳ ಜಾತಿಗಳನ್ನು ಮುರಿವ ಸರಳ ಮದುವೆಯೊಂದು ನಡೆದಿತ್ತು. ಮತ್ತೂ ಯಾಕೆಂದರೆ ಅಂದು ದಲಿತರಿಗೆ ಸ್ವಾಭಿಮಾನ ತಂದುಕೊಟ್ಟ ಡಾ|| ಅಂಬೇಡ್ಕರ್‌ರ ನೆನಪಿನ ದಿನಾಚರಣೆ ನಡೆದಿತ್ತು.

ಹೊಟ್ಟೆ ಹೊರೆಯುವ ಕೂಲಿಗೂ ಹೋಗದೆ ಹಾರೋಹಳ್ಳಿಯ ಸ್ತ್ರೀ ಪುರುಷರೆಲ್ಲ ಒಟ್ಟಾಗಿ ಶಾಸ್ತ್ರಗಳಿಲ್ಲದ, ಪುರೋಹಿತರಿಲ್ಲದ, ಪ್ರೀತಿಯ ಸರಳ ಮದುವೆಯಲ್ಲಿ ಪಾಲುಗೊಂಡರು. ಚಿಂತಾಮಣಿಯ ಪದ್ಮ ಹಾಸನ ಜಿಲ್ಲೆ ಉದ್ದೆಹೊಸಹಳ್ಳಿಯ ರುದ್ರಯ್ಯ—ಇವರುಗಳು ಪರಸ್ಪರ ಹೂಮಾಲೆ ಹಾಕಿಕೊಂಡಾಗ ಸಹಸ್ರಾರು ವರ್ಷಗಳಿಂದ ಹಿಂದೂ ಪಟ್ಟಭದ್ರರ ಕುತಂತ್ರದಿಂದ ಛಿದ್ರವಾಗಿಯೂ ಸಮಾನ ಸಂಸ್ಕೃತಿಯುಳ್ಳ ಮತ್ತು ಸಮಾನ ನೋವುಳ್ಳ ಹೊಲೆ ಮಾದಿಗರ ನಡುವಿನ ಒಳಜಾತಿ ತಡಿಕೆಯು ಮುರಿದು ಬಿತ್ತು. ಹಿರೀಕರೊಬ್ಬರು ಕಣ್ಣಲ್ಲಿ ಮಿಂಚು ತುಂಬಿಕೊಂಡು ಬಂದು ಗಂಡುಹೆಣ್ಣಿನ ಕೈಯ್ಯಲ್ಲಿ ಹೀಗೆಹೇಳಿಸಿದರು : "ಆಕಾಶದಲ್ಲಿ ಸೂರ್ಯಕಂಡೆ, ಭೂಮಿ ಕಂಡೆ ಮುತ್ತಿನಂಥ ಹೆಂಡತಿ ಕಂಡೆ, ಮುತ್ತಿನಂಥ ಗಂಡನ

ವರದಿ

ಕಂಡೆ" ನಂತರ ನವದಂಪತಿಗಳು ಅಂಬೇಡ್ಕರ್ ಭಾವಚಿತ್ರ ಅನಾವರಣ ಮಾಡಿ, ಹೋರಾಟದ ಹಾಡು ಹೇಳಿ ದಲಿತ ಸಂಘರ್ಷ ಸಮಿತಿ ಏರ್ಪಡಿಸಿದ್ದ ಅಂಬೇಡ್ಕರ್ ನೆನಪಿನ ದಿನಾಚರಣೆ ಉದ್ಘಾಟಿಸಿದರು. ಕೆ. ನಾರಾಯಣಸ್ವಾಮಿ ಅಥಿತಿಗಳಾಗಿದ್ದ ಈ ಸಭೆಯಲ್ಲಿ, ವೆಂಕಟಸ್ವಾಮಿ, ಕೆ. ರಾಮಯ್ಯ, ಸಿದ್ಧಲಿಂಗಯ್ಯ, ಗಂಗಯ್ಯ, ವೆಂಕಟೇಶ ಮಾತಾನಾಡಿ—"ಮೊದಲು ಉಪಜಾತಿಗಳನ್ನು ನಾಶಮಾಡಿ, ಅಸ್ಪೃಶ್ಯರೆಲ್ಲ ಒಟ್ಟಾಗಿ ಇಡೀ ಜಾತಿ ವ್ಯವಸ್ಥೆ ವಿರುದ್ಧ ಹೋರಾಡಿ" ಎಂದ ಅಂಬೇಡ್ಕರ್ ಮಾತನ್ನು ಕಾರ್ಯರೂಪಕ್ಕಿಳಿಸುವ ಪಣತೊಡಲು ಕರೆ ನೀಡಿದರು. —ಎಂ.ಡಿ. ಗಂಗಯ್ಯ

'ನಡೆದಾಡುವ ಜ್ಞಾನ ಭಂಡಾರ ಎನ್ನಿಸಿಕೊಂಡ ಶ್ರೀ ಎಂ. ವಿ. ಚಿತ್ರಲಿಂಗಯ್ಯನವರು ಗತಕಾಲದಿಂದ ತೆಗೆದು ನಮಗೆ ಚಂಡಾಲನನ್ನು ಕೊಟ್ಟಿದ್ದಾರೆ. ಈ ವಿಭಾಗದಲ್ಲಿ ಮುಂದಿನ ಸಂಚಿಕೆಯಲ್ಲಿ 'ಡಾ. ಚಿದಾನಂದಮೂರ್ತಿಗಳೊಡನೆ ಗತಕಾಲಕ್ಕೆ ಪ್ರಕಟವಾಗುವುದು.

'ಚಂಡಾಲ'

'ಬ್ರಾಹ್ಮಣನಿಂದ ಚಂಡಾಲನವರೆಗೆ' ಎಂಬ ನುಡಿಗಟ್ಟು ಸರ್ವೇಸಾಮಾನ್ಯವಾಗಿ ಬಳಕೆಯಲ್ಲಿ ಬಂದು ಬಿಟ್ಟಿದೆ. ಏಕೆಂದರೆ ಹಿಂದೂಜನರಲ್ಲಿ ತುತ್ತತುದಿಯಲ್ಲಿ ಬ್ರಾಹ್ಮಣನೂ ಕಟ್ಟಕಡೆಯಲ್ಲಿ ಚಂಡಾಲನೂ ಇರಿಸಲ್ಪಟ್ಟಿದ್ದಾರೆ. ಆದರೆ, ಇಂಡಿಯಾ ದೇಶದ ಯಾವುದೇ ಪ್ರಾಂತದಲ್ಲಿಯಾಗಲಿ ಬ್ರಾಹ್ಮಣನೆಂಬ ಯಾವನಾದರೂ ವ್ಯಕ್ತಿಯನ್ನು ಪತ್ತೆಮಾಡಬಹುದು; ಆದರೆ ಚಂಡಾಲನೆಂಬ ಹೆಸರಿನ ಯಾವ ಜಾತಿಯೂ ದೊರಕಲಾರದು. ಈ ಭೂತಳದ ಮೇಲೆ ಇಂತಹದೊಂದು ಜಾತಿ ಇದ್ದಿತೇ ಎಂಬುದೂ ಕೂಡ ಅನುಮಾನಾಸ್ಪದವಾಗಿದೆ. ಆದರೂ ಕೂಡ 'ಚಂಡಾಲ'ಪದವನ್ನು ಪರಂಪರಾಗತವಾಗಿ, ಸ್ಮಶಾನಗಳಲ್ಲಿ ಶವಸಂಸ್ಕಾರದಲ್ಲಿ ಸಹಕರಿಸುವ ಪರಿಶಿಷ್ಟ ಜನಾಂಗದ ವ್ಯಕ್ತಿಗಳಿಗೆ, ಪೂರ್ವಾಪರ ಯೋಚನೆ ಇಲ್ಲದೆ ಬಳಸಲಾಗುತ್ತಿದೆ. ಇದು ಸರಿಯೆ? ಎಂಬುದು ಇಲ್ಲಿ ಪರಾಮರ್ಶನೀಯವಾದ ವಿಷಯ.

ಸಂಸ್ಕೃತ ಭಾಷೆಯ ಈ "ಚಂಡಾಲ/ಚಾಂಡಾಲ ಪದವನ್ನು 'ಚಡ್' ಎಂಬ ಧಾತುವಿಗೆ 'ಆಲಚ್' ಪ್ರತ್ಯಯ ಸೇರಿಸಿ ನಿರ್ಮಿಸಿಕೊಳ್ಳಲಾಗಿವೆ ಎಂದು ವೈಯಾಕರಣಿಗಳೂ ಕೋಶಕಾರರುಗಳೂ ಹೇಳುತ್ತಾರೆ. 'ಚಡ್' ಧಾತುವಿಗೆ–ತೀವ್ರವಾಗಿ ಕೋಪಗೊಳ್ಳು, ಕ್ರೂರನಾಗು, ಎಂಬ ಅರ್ಥಗಳಿರುವುದರಿಂದ "ಚಂಡಾಲ|ಚಾಂಡಾಲ"ಎಂಬ ಪದಗಳಿಗೆ ಮಹಾಕೋಪಿಷ್ಠ, ಕ್ರೂರಕರ್ಮಿ ಎಂಬ ತಾತ್ಪರ್ಯವುಂಟಾಗುವುದೇ ಹೊರತಾಗಿ, ಇದೊಂದು ಜಾತಿ ಎಂಬ ಅರ್ಥ ಕೂಡಿ ಬರುವುದಿಲ್ಲ. ಆದ್ದರಿಂದ ಈ ಪದವು ಶಬ್ದತಃ ಒಂದು ಗುಣವಾಚಕ ವಿಶೇಷಣ ಮಾತ್ರ.

ಆದರೆ, ಮನುಸ್ಮೃತಿಯ ರೀತ್ಯಾ, ಇದೊಂದು ಸಂಕೀರ್ಣವರ್ಣ ; ಎಂದರೆ ವಿಲೋಮ ಸಂಪರ್ಕದಿಂದುಂಟಾದ ಬೆರಕೆ ಜಾತಿ. "ಶೂದ್ರಾದಾಯೋಗವಃ ಕ್ಷತ್ತಾ ಚಂಡಾಲಶ್ಚಾಧಮೋಮತಃ" ಎಂದರೆ ಶೂದ್ರನಿಂದ ವೈಶ್ಯಸ್ತ್ರೀಯಲ್ಲಿ ಜನಿಸಿದವನು "ಆಯೋಗವ" ಎನ್ನಿಸಿಕೊಳುತ್ತಾನೆ. ಆದೇ, ಶೂದ್ರನಿಂದ ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿದ ಮಗನು "ಕ್ಷತ್ತಾ" ಎನ್ನಿಸಿಕೊಳ್ಳುತ್ತಾನೆ. ಹಾಗೆಯೇ ಶೂದ್ರ ಪುರುಷನಿಂದ ಬ್ರಾಹ್ಮಣಸ್ತ್ರೀಯಲ್ಲಿ ಉದ್ಭವಿಸಿದವನು 'ಚಂಡಾಲ' ನೆನಿಸಿಕೊಳ್ಳುತ್ತಾನೆ. ಈತನು ಪರಮ ಅಧಮನು ಎಂದರೆ ಅತಿ ಕೀಳು ಎಂದು ಹೇಳಲಾಗಿದೆ. ಆದ್ದರಿಂದ ಇವನು "ಅಂತ್ಯಜ"

ಪ್ರಾಚೀನ ಇಂಡೋ–ಆರ್ಯ ಸಾಹಿತ್ಯದಲ್ಲಿ ಬ್ರಾಹ್ಮಣ ಗ್ರಂಥಗಳು ಹಾಗೂ ಉಪನಿಷತ್ತುಗಳಲ್ಲೂ "ಚಂಡಾಲ" ಎಂಬ ಪದ ಪ್ರಯೋಗವಿದೆ. ಅಲ್ಲಿ ಅದು ಜಾತಿ ಸೂಚಕ ಶಬ್ದವಾಗಿದೆ. ಆದ್ದರಿಂದ ಅಷ್ಟು ಪುರಾತನಕಾಲದಲ್ಲಿ "ಚಂಡಾಲ ಎಂಬ ಜಾತಿಯೊಂದು ಇದ್ದಿತು ಎಂದು ಪರಿಭಾವಿಸಬೇಕಾಗುತ್ತದೆ. ಹಾಗಾದರೆ, ಆ ಜನರು ಯಾರು? ಅವರು ಹೇಗಿದ್ದರು? ಅವರ ಜೀವನ ಕ್ರಮವೇನು ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಬೇಕಾಗುತ್ತದೆ.

ವಾಲ್ಮೀಕಿಯ ರಾಮಾಯಣದಲ್ಲಿ—

"ಅಥ ರಾತ್ರ್ಯಾಂ ವ್ಯತೀತಾಯಾಂ ತಸ್ಯಾಂ ರಾಜಾ ಬಭೂವಹ| ಚಂಡಾಲ ದರ್ಶನೋ ರಾಮ ! ಸಪ್ಯ ಏವ ದುರಾಕೃತಿಃ। ನೀಲ ಪೀತಾಂಬರಧರೋ ರಕ್ತಾಂಬರ ಕೃತೋತ್ತರಃ। ಸಂರಬ್ಧ ತಾಮ್ರ ಘೋರಾಕ್ಷಃ ಕರಾಲೋ ಹರಿ ಪಿಂಗಲಃ। ಋಕ್ಷ ಚರ್ಮನಿವಾಸೀ ಚ ಲೌಹಾಭರಣ ಭೂಶಿತಃ||"

ಎಂದು ಅವರ ಸ್ವರೂಪವರ್ಣನೆ ಮಾಡಲಾಗಿದೆ ಈವರ್ಣನೆಯು ಕವಿಯ ಕಪೋಲ ಕಲ್ಪನೆಯೋ ಅಥವಾ ವಾಸ್ತವಿಕತೆಯ ಲವಲೇಶವಾದರೂ ಇದರಲ್ಲಿದೆಯೋ, ಹೇಳುವುದು ಕಷ್ಟ. ಆದರೂ, ಈ ಹೇಳಿಕೆಯ ಪ್ರಕಾರ, ಚಂಡಾಲರು ರಾತ್ರಿಯ ವೇಳೆಯಲ್ಲಿತಾವೇ ರಾಜರುಗಳಾಗಿ ಬಿಡುತ್ತಿದ್ದರು. ಬಹಳ ವಿಕಾರವಾದ ರೂಪವುಳ್ಳವರಾಗಿದ್ದರು. ನೀಲಿಯ ಅಥವಾ ಹಳದಿಯ ಬಟ್ಟೆಗಳನ್ನು ಅದರ ಮೇಲೆ ಕೆಂಪು ಬಟ್ಟೆಯ ಹೊದಿಕೆಯನ್ನು ಹೊದ್ದಿರುತ್ತಿದ್ದರು. ಅವರ ಕಣ್ಣುಗಳು ಅತಿ ಕೆಂಪಾಗಿರುತ್ತಿದ್ದುವು. ಅವರ ಮೈ ಕಪ್ಪು ಅಥವಾ ಎಣ್ಣೇಗೆಂಪು ಅಥವಾ ಕಂದು ಬಣ್ಣದ್ದಾಗಿರುತ್ತಿದ್ದಿತು. ಅವರು ಕರಡಿಯ ಚರ್ಮವನ್ನು ಬಳಸುತ್ತಿದ್ದರು (ಅಥವಾ ಕರಡಿಯ ಗುಹೆಗಳಲ್ಲಿ ವಾಸಿಸುತ್ತಿದ್ದರು) ಕಬ್ಬಿಣದಿಂದ ಮಾಡಿದ ಒಡವೆಗಳನ್ನು ಧರಿಸುತ್ತಿದ್ದರು— ಎಂದು ತಿಳಿದು ಬರುತ್ತದೆ.

ಈ ವರ್ಣನೆಯನ್ನು ಗಮನಿಸಿದರೆ ನಮಗೆ ಪ್ರಾಗೈತಿಹಾಸಿಕ (Pre-historic) ಗುಹಾಮಾನವನ ಸ್ಮರಣೆಯುಂಟಾಗುತ್ತದೆ. ಬಹುಶಃ ಇಂಡೋ ಆರ್ಯರು ಭಾರತಕ್ಕೆ ಪ್ರವೇಶಿಸುವುದಕ್ಕೆ ಮೊದಲೇ ಇಲ್ಲಿದ್ದ ಆದಿವಾಸಿಗಳನ್ನು ಅವರು "ಚಂಡಾಲ" ರೆಂದು ಕರೆದಿರಬಹುದು. ಆ ಚಂಡಾಲರು ಕಬ್ಬಿಣದ ಯುಗದ (Iron–age) ಸಂಸ್ಕೃತಿಯನ್ನು ಮೈಗೂಡಿಸಿಕೊಂಡು, ಅದರಿಂದ ಮುಂದಕ್ಕೆ ಪ್ರಗತಿಕಾಣದೆ, ಅದೇ ಮಟ್ಟದಲ್ಲಿ ಹಿಂದೆ ಬಿದ್ದಿದ್ದ ಒಂದು ದ್ರಾವಿಡ ಜನಾಂಗವಿರಬಹುದು ಅಥವಾ ಮುಂಡಾಬುಡಕಟ್ಟಿನ ಜನರಿರಬಹುದು.

ಇಂಡೋ ಆರ್ಯನ್ನರು ಪ್ರಬಲರಾದ ಮೇಲೆ, ಇಲ್ಲಿನ ಮೂಲ ನಿವಾಸಿಗಳಾದ ಆದಿವಾಸಿ ಜನಾಂಗಗಳನ್ನೆಲ್ಲ ಹೆದರಿಸಿ ಬೆದರಿಸಿ ಆದುಮಿಕೊಂಡನಂತರ, ಅವರಲ್ಲಿ ಕೆಲಕೆಲವರಿಗೆ ಕೆಲಕೆಲವು ನಿಕೃಷ್ಟ ಕಾರ್ಯಭಾರಗಳನ್ನು ಹೊರಿಸಿದರು. ಅವರ

ಗತ ಕಾಲದಲ್ಲಿ.....

ಜೀವನ ಕ್ರಮವನ್ನು ಮತ್ತಷ್ಟೂವಿಕೃತಗೊಳಿಸಿದರು. "ಚಂಡಾಲ" ರೆನ್ನಿಸಿಕೊಂಡ ಪಾಯಿಗಳಿಗೆ ಮನುವು ಯಾವ ವ್ಯವಸ್ಥೆಯನ್ನು ಮಾಡಿದ್ದಾನೆಂಬುದನ್ನು ಗಮನಿಸಿರಿ.

ಚಂಡಾಲ ಶ್ವಪಚಾನಾಂ ತು ಬಹಿರ್ಗ್ರಾಮಾತ್ ಪ್ರತಿಶ್ರಯಃ।
ಅಪಪಾತ್ರಾಶ್ಚ ಕರ್ತವ್ಯ ಧನಮೇಷಾಂ ಶ್ವಗರ್ದಭಂ ||

ಎಂದರೆ ಚಂಡಾಲ–ಶ್ವಪಚಾರುಗಳಿಗೆ ಗ್ರಾಮದಿಂದ ಹೊರಗೆ ವಾಸಸ್ಥಾನ ಕೊಡಬೇಕು. ಹಣಕ್ಕೆ ಅವರನ್ನು ಅಪಪಾತ್ರರನ್ನಾಗಿ ಮಾಡಬೇಕು.ಅವರ ಹಣವೆಂದರೆ ನಾಯಿಗಳು ಮತ್ತು ಕತ್ತೆಗಳು ಮಾತ್ರ.

ವಾಸಾಂಸಿ ಮೃತಚೇಲಾನಿ, ಭಿನ್ನಭಾಂಡೇಷು ಭೋಜನಂ।
ಕಾರ್ಷ್ಣಾಯಸ ಮಲಂಕಾರಃ ಪರಿವ್ರಜ್ಯಾಚ ನಿತ್ಯಶಃ॥

ಎಂದರೆ ಅವರು ಉಡುವ ಬಟ್ಟೆಗಳು ಹೆಣಗಳ ಮೇಲಿದ್ದು ಬಿಸಾಡಿದವುಗಳಾಗಿರಬೇಕು. ಒಡೆದ ಮಡಕೆಗಳಲ್ಲಿ ಅವರು ಊಟಮಾಡಬೇಕು; ಕಬ್ಬಿಣದಿಂದ ಮಾಡಿದ ಒಡವೆಗಳೇ ಅವರ ಅಲಂಕಾರಗಳಾಗಿರಬೇಕು. ನಿತ್ಯವೂ ಅಲೆಮಾರಿಗಳಾಗಿರಬೇಕು,

ನ ತೈಃ ಸಮಯಮನ್ವಿಚ್ಛೇತ್ ಪುರುಷೋ ಧರ್ಮಮಾಚರನ್।
ವ್ಯವಹಾರೋ ಮಿಥಸ್ತೇಷಾಂ ವಿವಾಹಃ ಸದೃಶೈಃ ಸಹ||

ಎಂದರೆ, ಧರ್ಮವನ್ನು ಆಚರಿಸುತ್ತಿರುವ ಪುರುಷನು ಅವರೊಡನೆ ಯಾವ ವ್ಯವಹಾರವನ್ನೂ ಇಟ್ಟುಕೊಳ್ಳಲು ಬಯಸಕೂಡದು. ಅವರ ವ್ಯವ

ಹಾರಗಳು ಅವರಂತಹವರೊಡನೆಯೇ ಸೀಮಿತವಾಗಿರಬೇಕು. ಮದುವೆಯೂ ಅಷ್ಟೇ.

ಅನ್ನಮೇಷಾಂ ಪರಾಧೀನಂ ದೇಯಂ ಸ್ಯಾದ್ಭಿನ್ನ ಭಾಜನೇ ।
ರಾತ್ರಾವ ವಿಚರೇಯುಸ್ತೇ ಗ್ರಾಮೇಷು ನಗರೇಷು-ಚ॥

ಅರ್ಥಾತ್, ಇವರ (ಚಂಡಾಲರ) ಊಟವು ಪರಾಧೀನವಾಗಿರಬೇಕು. (ಎಂದರೆ, ಯಾರಾದರೂ ಕೊಟ್ಟರೆ ಉಂಟು, ಕೊಡದಿದ್ದರೆ ಇಲ್ಲ). ಹಾಗೆ ಅನ್ನ ಹಾಕುವಾಗಲೂ ಒಡೆದು ಹೋದ ಮುರುಕು ಮಡಕೆಯಲ್ಲಿ ಕೊಡಬೇಕು. ಇವರು ಗ್ರಾಮಗಳಲ್ಲಿಯೂ, ನಗರಗಳಲ್ಲಿಯೂ ರಾತ್ರಿಯಲ್ಲಿ ಅಡ್ಡಾಡಬಾರದು.

ದಿವಾ ಚರೇಯುಃ ಕಾರ್ಯಾರ್ಥಂ ಚಿಹ್ನಿತಾ ರಾಜ ಶಾಸನೈಃ ।
ಅಬಾಂಧವಂ ಶವಂ ಚೈವಂ ನಿರ್ಹರೇಯುರಿತಿ ಸ್ಥಿತಿಃ॥

ಅರ್ಥಾತ್, ರಾಜ-ಶಾಸನಗಳಿಂದ ಚಿಹ್ನಿತರಾಗಿ ಕಾರ್ಯಾರ್ಥವಾಗಿ ಮಾತ್ರ ಹಗಲಿನಲ್ಲಿ ತಿರುಗಾಡಬಹುದು. ಯಾರೂ ನೆಂಟರಿಲ್ಲದ ಹೆಣವನ್ನು ಮಾತ್ರ (ಬೇವರ್ಸಿ ಹೆಣವನ್ನು) ಎತ್ತಿಕೊಂಡು ಒಯ್ಯಬೇಕು. ಇದು ಅವರ ಸಾಮಾಜಿಕ ನಿಲುವು.

ವಧ್ಯಾಂಶ್ಚ ಹನ್ಯುಃ ಸತತಂ ಯಥಾಶಾಸ್ತ್ರಂ ನೃಪಾಜ್ಞಯಾ।
ವಧ್ಯ-ವಾಸಾಂಸಿ ಗೃಹ್ಣೀಯುಃ ಶಯ್ಯಾಶ್ಚಾಭರಣಾನಿ ಚ॥

ಎಂದರೆ, (ಅರ್ಥ) ಶಾಸ್ತ್ರಕ್ಕನುಸಾರವಾಗಿ ಅಥವಾ (ಧರ್ಮ) ವ್ಯವಸ್ಥೆಗನುಗುಣವಾಗಿ, ರಾಜನ ಅಪ್ಪಣೆಯಿಂದ ಮರಣದಂಡನೆ ವಿಧಿಸಲ್ಪಟ್ಟ ವ್ಯಕ್ತಿಗಳನ್ನು ಸತತವಾಗಿ ಕೊಲ್ಲುವುದು ಚಂಡಾಲರ ಕೆಲಸ. ವಧ್ಯಸ್ಥಾನದಲ್ಲಿ ಕೊಂಡೊಯ್ದು ಶೂಲಕ್ಕೇರಿಸುವುದು ಅಥವಾ ಶಿರಚ್ಛೇದನ ಅಥವಾ ಅಂಗಚ್ಛೇದನ ಚಂಡಾಲರ ಕೆಲಸವಾಗಿದ್ದಿತು. ಅಂತಹ ಕೊಲ್ಲಲ್ಪಡತಕ್ಕ ವ್ಯಕ್ತಿಗಳ ಬಟ್ಟೆಗಳನ್ನೂ, ಹಾಸಿಗೆಯನ್ನೂ, ಒಡವೆಗಳನ್ನೂ ಚಂಡಾಲರು ತೆಗೆದುಕೊಳ್ಳಬಹುದಿತ್ತು. ಬಹುಶಃ ಅದೇ ಅವರಿಗೆ ಸಲ್ಲುತ್ತಿದ್ದ ಪಾರಿಶ್ರಮಿಕ ಅಥವಾ ಸಂಭಾವನೆ ಎಂತಲೇ ಕಾಣುತ್ತದೆ.

ಇದು ಮನುಮಹಾರಾಜ(?)ನ ವ್ಯವಸ್ಥೆ. ಇವೆಲ್ಲವನ್ನೂ ಗಮನಿಸಿದರೆ, ಪ್ರಾಚೀನ ಇಂಡೋ ಆರ್ಯನ್ ಬುಡಕಟ್ಟಿನ ಜನರು ಆದಿವಾಸಿಗಳಿಂದ ತುಂಬಿದ್ದ ಇಂಡಿಯಾದೇಶಕ್ಕೆ ಪ್ರವೇಶಿಸಿ ಮೂಲ ನಿವಾಸಿಗಳ ನೆಲೆಗಳನ್ನೆಲ್ಲ ಒಂದೊಂದಾಗಿ ಆಕ್ರಮಿಸಿಕೊಳ್ಳುತ್ತಾ, ಬಲಗೊಂಡನಂತರ, ಇಲ್ಲಿನ ಮುಗ್ಧರಾದ ಕಾಡುಜನರನ್ನು ತಮಗೆ ತೋಚಿದಂತೆಲ್ಲ ವಿಂಗಡಿಸಿ, ಅವರ ಹಣೆಗೆ ಜಾತಿಗಳ ಪಟ್ಟಿಗಳನ್ನು ಹಚ್ಚಿ, ತಮ್ಮ ವರ್ಣವ್ಯವಸ್ಥೆಗೆ ಒಳಗು ಮಾಡಿಕೊಂಡು, ಉಳಿದವರನ್ನು ಹೊರಕ್ಕೆ ತಳ್ಳಿ, ಮನಸ್ವಿಯಾಗಿ ಅವರ ಭೂಸ್ವಾಮ್ಯವನ್ನು ಕಿತ್ತುಕೊಂಡದ್ದಲ್ಲದೆ, ಅವರ ಅನ್ನ ನೀರಿಗೂ ಆಧಾರವಿಲ್ಲದಂತೆಮಾಡಿ, ಬಹಳ ನೃಶಂಸನೀಯವಾದ ಕಟ್ಟಳೆಗಳನ್ನು ಮಾಡಿ ಆದಿವಾಸಿಗಳನ್ನು ಹತ್ತಿಕ್ಕಿದರು ಎಂದು ಖಚಿತವಾಗುತ್ತದೆ.

ಇಲ್ಲಿ ಮೂರು ಅಂಶಗಳು ಗಮನಾರ್ಹವಾಗಿವೆ. ಒಂದನೆಯದು ಚಂಡಾಲ ಎಂಬ ಶಬ್ದವು ಗುಣವಾಚಕವಾಗಿ "ಕ್ರೂರಕರ್ಮಿ, ಅತಿಕೋಪಿಷ್ಠ ಎಂಬುದು/ ಎರಡನೆಯದು ಮನುವಿನ ಸಂಕೀರ್ಣ ವರ್ಣ ವಿವರಣೆಗನುಗುಣವಾಗಿ ಶೂದ್ರ ಬೀಜದಿಂದ ಬ್ರಾಹ್ಮಣ ಕ್ಷೇತ್ರದಲ್ಲಿ ಉದ್ಭವಿಸಿದ ನಿಷಿದ್ಧ ಸಂತಾನ ಎಂಬುದು. ಮೂರನೆಯದು, ಚಂಡಾಲರು ಕಬ್ಬಿಣದ ಯುಗದ ಗುಹಾನಿವಾಸಿಗಳಾಗಿದ್ದ ಯಾರೋ ಪ್ರಾಚೀನ ಆದಿವಾಸಿಗಳು ಎಂಬುದು

ಎಂ. ವಿ. ಚಿತ್ರಲಿಂಗಯ್ಯ

ಕಣ್ಮರೆಯಾದ ಕೆಂಪಣ್ಣ ......

ನಾಲ್ಕನೆ ಕ್ಲಾಸ್‌ವರಿಗೂ ನನ್ನ ಕ್ಲಾಸ್ ಮೇಟ್ ಆಗಿದ್ದ. ಅವನು ಹುಟ್ಟಿದ ಏಳೆಂಟು ದಿವಸಕ್ಕೆ ಅವ್ವ ತೀರಿಕೊಂಡಳು. ಬಾಣ್ತಿ ತಣ್ಣೀರು ಮುಟ್ಟಿದ್ಲು. ಯಾರೂ ನಿಗಮಾಡ್ಲಿಲ್ಲ ಅದ್ಕೆ ಸತ್ಲು ಅಂತ ಸುದ್ದಿ. ನಾಲ್ಕರಿಂದ ಪಾಸಾಗಿ ಐದಕ್ಕೆ ಸೇರಬೇಕು. ಆ ಕಾಲಕ್ಕೆ ಅವನ ಅಪ್ಪ ನೆಲ ನುಂಗ್ತು. ಅವರ ಅಪ್ಪನದು ಮರ ಕೊಯ್ಯುವ ಕಸುಬು. ಒಂದು ಸಾರಿ ಮರ ಕೊಯ್ಯುವಾಗ ರವಟು ಹೆಚ್ಚು ಕಮ್ಮಿ ಆಗಿ ಕೂಯ್ಯೊ ಗುಂಡಿಗೆ ಬಿದ್ದ. ಎದೆ ಮೇಲೆ ದೊಡ್ಡ ಜಾಲಿ ದಿಮ್ಮಿ ಮಗುಚಿಕೊಂಡ್ತು. ಅವನನ್ನು ಉಳಿಸಲು ಮಾಡಿದ ಸರ್ವ ಪ್ರಯತ್ನಗಳೂ ವಿಫಲ. ಮರ ಕೂಯ್ಯೊ ಗುಡ್ಡಣ್ಣ ಅಂದ್ರೆ ಸಣ್ಣ ಮಕ್ಳು ಕಿವಿಕೊಡ್ತವೆ. ಬುಗುರಿ, ಬಂಡಿ ಗಾಲಿ, ಚಿಳ್ಳೆದಾಂಡು ಮಾಡಿ ಮಕ್ಕಳಿಗೆ ಕೊಡುತ್ತಿದ್ದನು. ನಾನು ವಿದ್ಯಾಭ್ಯಾಸ ಮುಂದುವರಿಸಿದೆ. ದಿಕ್ಕು ದಿವಾಳಿ ಇಲ್ಲದ ಕೆಂಪಣ್ಣ ಉಳ್ಳವರ ಮನೆ ಜೀತಕ್ಕೆ 'ನಡೆದ. ನಾನು ಊರಿಗೆ ಹೋದಾಗ ಒಂದು ಕಟ್ಟು ಕ್ರಿಷ್ಣ ಬೀಡಿ ಕೊಡ್ಸು ಅಂತ ಜೀವ ತಿನ್ನುತ್ತಿದ್ದ. ಬೀಡಿ ಕೊಡ್ಸಿ ಕಟ್ಟೆ ಕಡೆ ಕರ್‍ಕಂಡೋತಿದ್ದೆ. ನನ್ನ ಕೆಲ್ಸಕ್ಕೆ ನಾನು ಮರದ ಬುಡದಲ್ಲಿ ಕೂತರೆ 'ಅದಂಗೆ ಇದಿಂಗೆ' ಎಂದು ಹುಳ್ಳಿಕಾಳು ಉರ್‍ದಂಗೆ ಮಾತಾಡುತ್ತಿದ್ದ. ಮಾತಾಡ್ತ ಮಾತಾಡ್ತ—'ಸಿದ್ದಣ್ಣ ನಮ್ಮೂರ ಗೌಡ್ನ ಮಗಳು ಅಮೇರಿಕಾ ದೇಸಕೋಗವಳಲ್ಲ ನಮ್ಮನೆಲ್ಲಾ ಮರ್‍ತವಳಲ್ವಾ? ನಮ್ನ ನೆನ್ಸಕಂಡು ಅವಳಿಗೇನಾಗ್‌ಬೇಕೊ? 'ಅಲ್ಲ ಸುಮ್ನೆ ಕೇಳ್ದೆ' ನೀನು ಸುಮ್ನೆ ಕೇಳಕಿಲ್ಲಾ ಏನು ಸಮಾಚಾರ ಹೇಳೋ ಎಂದು ಒತ್ತಾಯಿಸಿದೆ. 'ನೀನು ಬೈಯಲ್ಲ ಅಂದ್ರೆ, ಯಾರ್‍ಗೂ ಹೇಳ್ದಿದ್ರೆ ಹೇಳ್ತೀನಿ' ನನ್ನ ಮೇಲೆ ನಂಬಿಕೆ ಇದ್ರೆ ಹೇಳು ಇಲ್ದಿದ್ರೆ ಬ್ಯಾಡ ಬಿಡು, ನಾಚಿಕೆ, ಖುಷಿ, ನೋವನ್ನ ತುಂಬಿಕೊಂಡು ಹೇಳುತ್ತಿದ್ದ—'ಅವಮ್ಮನ್ನ ನಾನು ಮಡಿ ಕಂಡಿದ್ದೆ'. ಇಬ್ಬರೂ ಹಲ್ಲು ಗಿಂಜುತ್ತಿದ್ದೆವು.

ಎದ್ದು ತಿಗತೊಳ್ಕಂಡು ಬೀಡಿ ಕೇಳಿದ್ರೆ, ಬಲಗೈಲಿ ಬೀಡಿ ಬೆಂಕಿಪಟ್ನ ತೆಗೆದುಕೊಡ್ತ ಇದ್ದ. ಸಲೀಸಾಗಿ ಎಡಗೈಲಿ ಬೆಂಕಿಪಟ್ನ ಹಿಡ್ದು ಬಲಗೈಲಿ ಗೀಚಿ ಹಚ್ಚಲು ಅವನಿಗೆ ಆಗುತ್ತಿರಲಿಲ್ಲ. ಅವನು ಎಡಗೈ ಹೆಬ್ಬೆಟ್ಟು ಕಳೆದುಕೊಂಡವನು. ಅದೊಂದು ದೊಡ್ಡ ಕತೆ. ಕೆಸರು ಗದ್ದೆಗೆ ಹೊಂಗೆ ಸೊಪ್ಪು ಕಡಿಯಲು ಹೋಗಿದ್ದ. ಎಡಗೈಲಿ ಕೊಂಬೆ ಹಿಡ್ಕಂಡು ಬಲಗೈಲಿ ಕಡಿತ್ತಿದ್ದ ನೋಡು ಮಿಸ್ ಆಗಿ ಹೆಬ್ಬೆಟ್ಟಿಗೆ ಏಟು ಬಿತ್ತು ತುಂಡಾಯ್ತು. ಮಚ್ಚು ಕೆಳಕ್ಕೆಸೆದು ದಥಾರನೆ ಇಳ್ದು ನೋಡಿದ್ರೆ ಒಂದು ಅಡಿ ಅಗ್ಲ ಕೆಸರು ನೀರು ಕೆಂಪಾಗಿ ನಿಂತಿತ್ತು. ಅದರಲ್ಲಿ ಹೆಬ್ಬೆಟ್ಟಿನ

ಒಡಲ ಮಾತು

ತುಂಡು ತಕತಕ ಅನ್ನುತ್ತಿತ್ತು. ಏನೋ ಹಿಂಗಾಯ್ತಲ್ಲೊ ಅಂದ್ರೆ, ಏನ್ಮಾಡಕಾಯ್ತದೆ ಅವತ್ತಿನಗಳಿಗೆ ಅಂಗಿತ್ತು ಯಾರ್‍ಮಕ ನೋಡಿದ್ನೊ ಎದ್ದು ಐದು ಬೆಳ್ಳು ಒಂದೇ ಸಮ ಇಲ್ಲ ನೋಡು" ಎಂದು ಬಲಗೈ ತೋರಿಸುತ್ತಿದ್ದ. ನೆಲಗುದ್ದಿ ನೀರ ಚಿಮ್ಸೊ ಹುಡ್ಗ ಹೆಬ್ಬಟ್ನು ಕಳ್ಕಂಡನಲ್ಲಾ ಅಂತ ಊರಿನ ಜನ ನಿಟ್ಟುಸಿರು ಬಿಡ್ತದೆ.

ಈಗ ಕೆಂಪಯ್ಯ ಊಳಿನಲ್ಲಿಲ್ಲ. ಊರು ಬಿಟ್ಟು ನಾಲ್ಕೈದು ವರ್ಷಗಳಾದವು. ಯತ್ತೋದ, ಏನ್ಮಾಡ್ತನೆ ಯಾರಿಗೂ ಗೊತ್ತಿಲ್ಲ. ಬಿತ್ತಿದ್ರೆ ಬೆಳ್ಯೊ ಅಂತ ಹುಡ್ಗ ಪಟೇಲ್ರ ಮನೆ ಸೇರಿ, ಅವ್ರ ಸೂಳೆ ಸಂಗ ಮಾಡಿ ಊರು ಬಿಟ್ಟ ಎನ್ನುವುದು ಸುತ್ತೇಳು ಹಳ್ಳಿಯ ನಾಲಿಗೆ ಮೇಲಿರುವ ಸುದ್ದಿ

● ಕೇಬಿ

ನಾರಾಯಣಪುರದಲ್ಲಿ ನಾಂದಿಯಾದ ಜಾತಿ ಕಿಡಿ

ಕರ್ನಾಟಕವನ್ನೆ ನಡುಗಿಸಿದ ಈ ಜಾತಿ ಜ್ವಾಲೆ ಎದ್ದ ನಾರಾಯಣಪುರವು ಬಸವ ಕಲ್ಯಾಣ ತಾಲ್ಲೂಕಿನಲ್ಲಿದೆ. ಈ ನಾರಾಯಣಪುರ ಸುಮಾರು ಮೂರು ಸಾವಿರದಷ್ಟು ಜನಸಂಖ್ಯೆ ಹೊಂದಿದ್ದು ಇದರಲ್ಲಿ ಸುಮಾರು ೩೦೦ ಮಂದಿ ದಲಿತವರ್ಗದವರು. ಊರಿನ ಸವರ್ಣೀಯರಲ್ಲಿ ಶೇ ೯೫ ಭಾಗ ಲಿಂಗಾಯಿತರು. ಉಳಿದ ಐದು ಭಾಗ ಇತರ ಅಲ್ಪ ಸಂಖ್ಯಾತ ಹಿಂದುಳಿದ ಜಾತಿಗಳ ಜನ ಇದ್ದಾರೆ. ಹೊಲಿ-ಗದ್ದೆ ಹೊಂದಿರುವ ಲಿಂಗಾಯಿತರು ಎಲ್ಲ ದೃಷ್ಟಿಯಿಂದಲೂ ಸುಸ್ಥಿತಿಯಲ್ಲಿದ್ದಾರೆ. ಆದರೆ ದಲಿತರಲ್ಲಿ ಕಾಲೇಜು ಮೆಟ್ಟಲು ಹತ್ತಿದವ ಒಬ್ಬನೂ ಇಲ್ಲ. ಎಲ್ಲರೂ ನಿರಕ್ಷರ ಕುಕ್ಷಿಗಳು. ಸವರ್ಣೀಯರ ಬದುಕನ್ನು ಹಸನು ಮಾಡಲು ಜೀವಮಾನದ ಜೀತ ಇವರ ಬದುಕು.

ಈ ಬಗೆಯ ಅನಾವಸ್ಥೆಯಲ್ಲಿರುವ ದಲಿತರು ವರ್ಷವರ್ಷವೂ ತಮ್ಮ ಆರಾಧ್ಯ ದೈವ ಡಾ|| ಬಾಬಾ ಸಾಹೇಬ ಅಂಬೇಡ್ಕರ್ ಅವರ ಜನ್ಮದಿನವನ್ನು ಸಂಭ್ರಮದಿಂದ ಆಚರಿಸುವರು. ಅಂಬೇಡ್ಕರ್ ಅವರ ಬಗೆಗೆ ಇವರಿಗೆ ಇರುವ ಗೌರವ ಎಷ್ಟಿದೆ ಎಂದರೆ ನಮಸ್ಕಾರ ಪದದ ಬಳಕೆ ಬದಲು ಮಕ್ಕಳು, ಮುದುಕರೂ ಹೆಂಗಸರೂ ಬಂದವರನ್ನು ಆತ್ಮೀಯತೆಯಿಂದ "ಜೈಭೀಮ್" ಎಂದು ಸ್ವಾಗತಿಸುವರು. ಈ ಭಾಗದ ಜನರಲ್ಲಿ ಅಂಬೇಡ್ಕರ್ ಬಗೆಗೆ ಸ್ವಾಭಿಮಾನ ಹುಟ್ಟಿಸಿರುವ ಕೀರ್ತಿ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಮತ್ತು ಬೌದ್ಧ ಬಿಕ್ಕುಗಳಿಗೆ ಸೇರಿದುದು. ಹಾಗೆಯೇ ಈ ಭಾಗಕ್ಕೆ ಬರುವ ಬೌದ್ಧ ಬಿಕ್ಕುಗಳಲ್ಲಿ ಉಪಾಲೆತೆರೋ ಜನಪ್ರಿಯ ವ್ಯಕ್ತಿ. ನಾರಾಯಣಪುರಕ್ಕೆ ಕಳೆದ ಮೂರುವರ್ಷಗಳಿಂದ ಸಂಪರ್ಕ ಇಟ್ಟುಕೊಂಡಿರುವ ಈ ಗುರು ಅಲ್ಲಿನ ದಲಿತರಿಗೆ ಅಂಬೇಡ್ಕರ್ ಹೋರಾಟ ಮತ್ತು ಭಗವಾನ್ ಬುದ್ಧನ ತತ್ವಗಳ ಪಾಠ ಹೇಳುವ ಮೂಲಕ ಅವರಲ್ಲಿ ಸಾಮಾಜಿಕ ಪ್ರಜ್ಞೆ ಮೂಡಲು ಕಾರಣವಾಗಿದ್ದಾರೆ.

ಈ ಸಾಮಾಜಿಕ ಎಚ್ಚರದಿಂದಾಗಿ ಇಲ್ಲಿನ ದಲಿತರು ಕಳೆದ ಮೂರು ವರ್ಷಗಳಿಂದ ಗ್ರಾಮ ದೇವತೆ ಲಕ್ಷ್ಮಿಯ ಹಬ್ಬದಲ್ಲಿ ತಲತಲಾಂತರದಿಂದ ದಲಿತ ಪೂಜಾರಿ ಮಾಡುತ್ತಿದ್ದ ಚೆತ್ರಲೆ ಸೇವೆಯನ್ನು ನಿಲ್ಲಿಸಿದ್ದಾರೆ, ಇದು ಸವರ್ಣೀಯರ ಆಕ್ರೋಶಕ್ಕೆ ಒಳಗಾಗಿದೆಯಾದರೂ ಇತ್ತೀಚೆಗೆ ಹೋಟಲಿಗೆ ನುಗ್ಗಿ ಎಲ್ಲರಿಗೂ ನೀಡುವ ಗ್ಲಾಸು, ಪ್ಲೇಟುಗಳನ್ನು ತಮಗೂ ನೀಡುವಂತೆ ಗದ್ದಲ ಉಂಟುಮಾಡಿದ ಒಂದೆರಡು ಘಟನೆಗಳು ಸಹ ಅಸಹನೆಗೆ ಕಾರಣವಾದವು. ಈ ಅಸಹನೆ ಬರೇ ಸಣ್ಣಪುಟ್ಟ ಮಾತುಗಳಲ್ಲಿ ನಡೆದುಹೋಗುತಿತ್ತು. ದಲಿತರ ಈ ಸೊಕ್ಕನ್ನು ಮುರಿಯಲು ಸವರ್ಣೀಯರು ಕಾಯುತ್ತಿದ್ದರು. ಪ್ರತಿ ವರ್ಷದಂತೆ ಈ ಬಾರಿಯು ೧೪ರಂದೇ, ದಲಿತರು ಜಯಂತಿ ಆಚರಿಸುತ್ತಾರೆಂದು ತಿಳಿದು ೧೬ರಂದು ಆಗಬೇಕಾಗಿದ್ದ ಬಾರ್ಸಿಹುಣ್ಣಿಮೆ ಹಬ್ಬದ ಆಚರಣೆಯನ್ನು ಈ ಸಲ ಎರಡು ದಿನ ಮುಂಚಿತವಾಗಿ ಅಂದರೆ ೧೪ರಂದೇ ಊರಿನ ಪ್ರಮುಖ ಬೀದಿಯಲ್ಲಿ ಪುಟ್ಟ ಚಪ್ಪರ ಒಂದನ್ನು ಹಾಕಿ ಕೋಲಾಟ ಆರಂಭಿಸಿದ ಸವರ್ಣೀಯರು ಜಗಳಕ್ಕೆ ಕಾದರು.

ಇತ್ತ ದಲಿತರು ತಮ್ಮ ಬೌದ್ಧ ಗುರು ಉಪಾಲೆಯವರು ಮಹಾರಾಷ್ಟ್ರದಲ್ಲಿ ೧೪ರಂದು ಜಯಂತಿ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ನಾರಾಯಣಪುರಕ್ಕೆ ೧೬ರಂದು ಬರುವುದಾಗಿ ತಿಳಿಸಿದ್ದರಿಂದ, ಊರಿನ ದಲಿತರೆಲ್ಲ ೧೬ರಂದು ಅಂಬೇಡ್ಕರ್ ಜನ್ಮದಿನದ ಸಿದ್ಧತೆ ನಡೆಸಿದರು. ಅಂದು ಸುಮಾರು ಸಂಜೆ ೬ಗಂಟೆಗೆ ಶೃಂಗರಿಸಿದ ಗಾಡಿಯಲ್ಲಿ ಅಂಬೇಡ್ಕರ್ ಮತ್ತು ಭಗವಾನ್ ಬುದ್ಧನ ಭಾವಚಿತ್ರಗಳನ್ನಿಟ್ಟು ಮೆರವಣಿಗೆ ಹೊರಟರು. ಸವರ್ಣೀಯರ ಕೇರಿಯ ಪ್ರಮುಖ ಬೀದಿಯಲ್ಲಿ ಸ್ವಲ್ಪ ದೂರ ಹೋದಾಗ ಕೋಲಾಟ ಆಡಲು ಲಿಂಗಾಯಿತರು ಹಾಕಿದ್ದ ಚಪ್ಪರ ತಡೆಯಿತು. ಅದೇ ಸಮಯದಲ್ಲಿ ಕೊಲಾಟ ಆಡುತ್ತಿದ್ದ ಸವರ್ಣೀಯರು ಮೆರವಣಿಗೆಯನ್ನು ತಡೆದು ಪಕ್ಕದ ಗಲ್ಲಿಯ ಮೂಲಕ ಹಾದು ಹೋಗುವಂತೆ ಹೇಳಿದರು. ಗಲ್ಲಿಯಲ್ಲಿ ಹೋಗಲು ನಿರಾಕರಿಸಿದ ದಲಿತರು ದಾರಿ ಬಿಡುವವರೆಗೂ ಹೋಗುವುದಿಲ್ಲ ಎಂದು ಪಟ್ಟಾಗಿ ಅಲ್ಲಿಯೇ ಕುಳಿತರು.

ರಕ್ಷಣೆಗೆಂದು ಬಂದಿದ್ದ ಇಬ್ಬರು ಪೊಲೀಸ್ ಪೇದೆಗಳು ಇಬ್ಬರ ನಡುವೆ ಸಂಧಾನ ತರುವಲ್ಲಿ ವಿಫಲರಾದರು. ಹೀಗೆಯೇ ಸುಮಾರು ರಾತ್ರಿ ೮ಗಂಟೆ ಉರುಳಿದರೂ ಯಾರೂ ಬಗ್ಗಲಿಲ್ಲ.

ಅಷ್ಟರಲ್ಲಿ ಜೀಪಿನಲ್ಲಿ ಮತ್ತಿಬ್ಬರು ಪೇದೆಗಳೊಡನೆ ಬಂದ ಬಸವಕಲ್ಯಾಣದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಎಸ್. ಎಸ್. ಬಳ್ಳಾರಿಯವರು ಎರಡು ಗುಂಪುಗಳ ನಡುವೆ ರಾಜಿಗೆ ಯತ್ನಿಸಿದರು. ಅವರ ಯತ್ನವೂ ಫಲಸಲಿಲ್ಲ. ದಲಿತ[ರ] ಹೆಣ್ಣು ಮಕ್ಕಳನ್ನು ಚುಡಾಯಿಸುವುದು, ಕಲ್ಲ[ು ಹೊಡೆ]ಯುವುದು, ಬೈಯುವುದು ಮುಂದುವರಿದೇ ಇತ್ತು. ಈ ನಡುವೆ ಪರಿಸ್ಥಿತಿಯನ್ನು ಹತೋಟಿಗೆ ತರಲ[ು] ಯತ್ನಿಸುತ್ತಿದ್ದ ಬಳ್ಳಾರಿಯವರನ್ನು "ಇವಹೊಲೆ[ಯ]ರವಂತ" ಎಂದು ಕಂಡು ಕಾಣದವರಂತೆ ರೇಗಿಸ[ು]ವುದು, ಅವರ ಮೇಲೂ ಕಲ್ಲು ಮಾಡುತ್ತಿದ್ದರು.

ರಾತ್ರಿ ೧೦ ಗಂಟೆ ಮೀರಿದರೂ ಪರಿಸ್ಥಿತಿ ಹೀಗೆಯೇ ಬಿಗಡಾಯಿಸುತ್ತಾ ಹೋಯಿತು. ಅಷ್ಟರಲ್ಲಿ ದಲಿತರ ಮೇಲೆ ಹಲ್ಲೆಗೆ ಸವರ್ಣೀಯರು ತಮ್ಮ ಮನೆಗಳಿಂದ ದೊಣ್ಣೆ, ಮಚ್ಚು ಮುಂತಾದ ಆಯುಧಗಳನ್ನು ತಂದು ಕೂತರು. ಕೆಲವು ಹುಡುಗರು ಮನೆಗಳ ಮೇಲೇರಿ ಕಲ್ಲಿಟ್ಟುಕೊಂಡು ಕೂತರು. ಆಗ 'ಧೈರ್ಯಇದ್ದರೆ ಈ ದಾರಿಯಾಗಿ ಹೋಗಿ ನೋಡುವಾ' ಎಂದು ಸವರ್ಣೀಯರು

ಒಳ ನೋಟ

ಸವಾಲುಹಾಕಿ ಜಗಳಕ್ಕೆ ಕಾಲುಕೆರೆಯುತ್ತಿದ್ದಂತೆ ಕಲ್ಲಿನ ಸುರಿಮಳೆಯಾಯಿತು. ಅಷ್ಟರಲ್ಲಿ ಬಳ್ಳಾರಿಯವರು ತಮ್ಮ ರಿವಾಲ್ವರ್‌ಗೆ ಗುಂಡು ಹಾಕಿಕೊಂಡರು. ಸವರ್ಣೀಯರೆಲ್ಲ ನಕಲಿ ಗುಂಡುಗಳು ಕಣೊ ಎಂದು ಗೇಲಿ ಮಾಡಿದರು. ಕೆಲವರು ಬಳ್ಳಾರಿಯವರ ಮೇಲೂ ಕಲ್ಲು ಬೀಸಾಕಿದರು. ಒಬ್ಬರೊಬ್ಬರು ಕೈಕೈ ಮಿಲಾಯಿಸುವ ಪರಿಸ್ಥಿತಿ ಉಂಟಾಯಿತು. ಬಳ್ಳಾರಿಯವರು ಎಚ್ಚರಿಕೆ ಕೊಟ್ಟು ಮೊದಲು ಗಾಳಿಗೆ ಗುಂಡುಹಾರಿಸಿದರು. "ನಕಲಿ ನಕಲಿ" ಎಂದು ಸವರ್ಣೀಯರು ಪೊಲೀ[ಸ]ರ ಮತ್ತು ದಲಿತರ ಮೇಲೆ ಬೀಳುಲು ಆರಂಭಿಸಿದರು. ಅಷ್ಟರಲ್ಲಿ ಎರಡು ಮೂರು ಗುಂಡುಗಳು ಹಾರಿದ್ದರಿಂದ ಗುಂಡು ಇಬ್ಬರನ್ನು ಬಲಿ ತೆಗೆದುಕೊಂಡಿತು. ಗುಂಡಿಗೆ ಆಹುತಿಯಾದವರಲ್ಲಿ ಒಬ್ಬನಾದ ವೈದ್ಯನಾಥ್ ಮನೆಯೊಂದರ ಛಾವಣಿ ಮೇಲೆ ಕಲ್ಲು ಉರುಳಿಸುತ್ತಾ ಕುಂತಿದ್ದಾಗ ಬಹುಶಃ ಗುಂಡು ಮೇಲೆ ಹಾರಿದಾಗ ಆತ ಸತ್ತಿ[ರ]ಬಹುದೆಂದು ಅನೇಕರ ಅಂದಾಜು. ನಾರಾಯಣಪುರದ ದಲಿತರು ಸವರ್ಣೀಯರು ಮತ್ತು ಅ[ಂದು] ಸಂದರ್ಭದಲ್ಲಿದ್ದವರು ಹೇಳಿದ ವಿಷಯಗಳಿವು.

ಬಾಲ್ಕಿ ನಾರಾಯಣಪುರದಲ್ಲಿ ನಡೆದದ್ದು ಹೀಗಿದೆ : ಖಂಡ್ರೆ ಅಧ್ಯಕ್ಷತೆಯಲ್ಲಿ ಅಕ್ಕಮಹಾದೇವಿಯನ್ನು ವೀರಶೈವರು ಎಳೆದಾಡಿ ಹಿಂದೂ ಮುಂದೂ ಸಂಭೋಗ ಮಾಡಿದರು. ಬಸವಣ್ಣನಿಗೆ ಎಕ್ಕಡದಲ್ಲಿ ಹೊಡೆದು ಕಕ್ಕಸ್ಸು ತಿನ್ನಿಸಿದರು. ಅಲ್ಲಮನ ಕತ್ತರಿಸಿ ಮಾಂಸ ತಿಂದರು. ಅಂದರೆ ಇವರೆಲ್ಲರ ತತ್ವಗಳನ್ನು ಸುಟ್ಟರು.

ಬಳ್ಳಾರಿ ವಿವರಣೆ

ಕಲ್ಲೇಟನಿಂದ ಗಾಯಗೊಂಡು ರಜಾದಲ್ಲಿದ್ದ ಬಳ್ಳಾರಿಯವರನ್ನು ಕಂಡೆವು. ಆಗ ತಾನೆ ಮೀಸೆ ಬರುತ್ತಿದ್ದ ಅವರಲ್ಲಿ ಪೋಲಿಸ್ ಕ್ರೌರ್ಯ ಇರಲಿಲ್ಲ. ನಾರಾಯಣಪುರದಲ್ಲಿ ಇಬ್ಬರು ಬಲಿಯಾದುದನ್ನು ನೋವಿನಿಂದ ನೆನಸಿಕೊಂಡರು. ಗುಂಡು ಹಾರಿಸಲೇ ಬೇಕಾಗಿ ಬಂದ ಪರಿಸ್ಥಿತಿಯನ್ನು ವಿವರಿಸಿದರು : "ಪರಸ್ಪರ ಬೈದಾಡುವುದು, ಕಲ್ಲು ತೂರುವುದು ನಾನು ಬಂದಾಗಲೂ ನಡೆಯುತ್ತಲೇ ಹೋಯಿತು. ಎರಡು ಕಡೆಯ ಮುಖಂಡರನ್ನು ಸೇರಿಸಿ ಮುಕ್ಕಾಲು ಗಂಟೆಗೂ ಹೆಚ್ಚು ಮಾತಾಡಿ ರಾಜಿಗೆ ಪ್ರಯತ್ನಿಸಿದರೂ ಫಲವಾಗಲಿಲ್ಲ. ಸವರ್ಣೀಯರು ಚಾವಣಿಲಿ ಸೇರಿಸಿಕೊಂಡಿದ್ದ ಕಲ್ಲನ್ನು ತೂರಿಸುವುದನ್ನು ಹೆಚ್ಚಿಸಿದರು. ಪೋಲಿಸರು ನಾಲ್ವರಿದ್ದು ಗುಂಪು ಚದುರಿಸಲು ಲಾಠಿಚಾರ್ಜು ಮಾಡುವುದು ಮೂರ್ಖತನವಾಗುತ್ತಿತ್ತು. ಸ್ವಲ್ಪ ಕಾಲ ಹೀಗೆ ಬಿಟ್ಟರೆ ನಾನೂ ಸೇರಿದಂತೆ ಪೋಲಿಸರೂ ಸೇರಿ ಹತ್ತಾರು ಜನರು ಬಲಿಯಾಗಬಹುದೆನ್ನಿಸಿತು. ತಕ್ಷಣ ತಾಲ್ಲೂಕು ಮ್ಯಾಜಿಸ್ಟ್ರೇಟ್‌ರಿಗೆ ಪರಿಸ್ಥಿತಿ ವಿವರಿಸಿ ಅವರನ್ನು ಕರೆತರಲು ಜೀಪ್ ಕಳುಹಿಸಿದೆ. ಬಹಳ ಹೊತ್ತು ಕಾಯಬೇಕಾಯಿತು. ಪ್ರತಿ ನಿಮಿಷಕ್ಕೂ ಹತೋಟಿ ಮೀರುತ್ತಿತ್ತು. ಹೀಗಿರುವಾಗ ಸವರ್ಣೀಯರ ಕಡೆಯಿಂದ ಬಹುಶಃ ಶಿವರಾಯ ಎಂಬಾತ 'ತಾಕತ್ತಿದ್ರೆ ಹಿಂಗ ಬನ್ರೊ' ಎಂದು ಕೂಗಿ ಸವಾಲು ಹಾಕಿದಾಗ ಹರಿಜನರು ಕೆರಳಿದರು ಪ್ರತಿಯಾಗಿ ಸವರ್ಣೀಯರ ಕಡೆಯಿಂದ ಕಲ್ಲು ಬೀಳುವುದು ವಿಪರೀತವಾಯಿತು. ಆಗ ರಾತ್ರಿ 11ಗಂಟೆ ನಾನು ಅಸಹಾಯಕನಾಗಿ ಎಚ್ಚರಿಕೆ ಕೊಟ್ಟು ಗಾಳಿಗೆ ಗುಂಡು ಹಾರಿಸಿದೆ. ಯಾರೂ ಚದುರಲಿಲ್ಲ. ನಾನ ನಮ್ಮ ಸಿಬ್ಬಂದಿ 9 ಗುಂಡು ಹಾರಿಸಿರಬಹುದು. ಇಬ್ಬರು ಸತ್ತರು. ಇದಕ್ಕಾಗಿ ನನಗೆ ನೋವಾಗಿದೆ. ಆದರೆ ನಾನು ಅಸಹಾಯಕನಾಗಿದ್ದೆ.

ಒಂದು ಚೀನಿ ನೀತಿ ಕಥೆ

ಕುರುಬ

ಒಂದು ದೊಡ್ಡ ಮರದ ಕೆಳಗೆ ತನ್ನ ಕುರಿಗಳನ್ನು ಕಾಯುತ್ತ ಒಬ್ಬ ಕುರುಬನು ಕೂತಿದ್ದನು. ಬಾಯಿಯಲ್ಲಿ ಪೈಪು ಕಚ್ಚಿಕೊಂಡು ಬೆನ್ನ ಮೇಲೆ ಬಂದೂಕ ಇಟ್ಟುಕೊಂಡಿದ್ದನು. ಒಬ್ಬ ದನ ಕಾಯುವವನು ತನ್ನ ದನಗಳನ್ನು ಮೇಯಿಸುತ್ತ ವಿಶ್ರಾಂತಿಗಾಗಿ ಅದೇ ಮರದ ಕೆಳಕ್ಕೆ ಬಂದನು. ಅವನು ಕೈಯಲ್ಲಿ ಒಂದು ಬಿದಿರು ದೊಣ್ಣೆ ಹಿಡಿದುಕೊಂಡಿದ್ದನು. ಇದನ್ನು ಕಂಡ ಕುರುಬನು ಹೇಳಿದನು 'ನೀನು ಈ ದೊಣ್ಣೆಯಿಂದ ದನಗಳನ್ನು ಹೊಡೆಯುತ್ತೀಯೆ' ಹಿಂಸೆ ಮಾಡಬಾರದು.

ದನ ಕಾಯುವವನು ಗದರಿದನು 'ಅಂಗಾದ್ರೆ ನೀನು ಯಾಕೆ ಬಂದೂಕ ಮಡಿಕಂಡಿದ್ದೀಯ?' 'ಬಂದೂಕ ಇಲ್ದೆ ಇದ್ರು ಪರವಾಗಿಲ್ಲ, ಸುಮ್ನೆ ಯಾರಾದ್ರು ಕಳ್ಳರು ಕುರಿ ಕದಿಯಲು ಬಂದ್ರೆ' ಅನ್ನುತ್ತಾ ಬಂದೂಕ ತೆಗೆದು ತನ್ನ ಪಕ್ಕದಲ್ಲಿಟ್ಟುಕೊಂಡನು. ಚಕ್ ಅಂತ ದನ ಕಾಯುವ ಹುಡುಗ ಬಂದೂಕವನ್ನು ಕೈಗೆತ್ತಿಕೊಂಡನು.

ದೂರದಲ್ಲಿ ಬರುತ್ತಿದ್ದ ಒಂದು ಹುಲಿಯು ಅವರ ಕಣ್ಣಿಗೆ ಕಂಡಿತು. ಕುರುಬನು ಭಯ ಬಿದ್ದು ಮರ ಹತ್ತಿದನು. ದನ ಕಾಯುವವನು ಬಂದೂಕದಿಂದ ಆ ಹುಲಿಗೆ ಗುರಿ ಇಟ್ಟನು. ಮರದ ಮೇಲೆ ಕುಂತಿದ್ದ ಕುರಿ ಕಾಯುವವನು ಅತ್ಯಂತ ಭೀತಿಯಿಂದ 'ಹೇ ಹುಡ್ಗ, ಗುಂಡು ಹಾರಿಸಬೇಡ ಹುಲಿ ಮನುಷ್ಯರನ್ನು ತಿಂದು ಹಾಕುತ್ತದೆ' ಎಂದು ಕೂಗಿದನು. ದನ ಕಾಯುವವನು ಗುಂಡು ಹಾರಿಸಿಬಿಟ್ಟನು. ಗುಂಡು ಹುಲಿಯ ಎರಡು ಕಣ್ಣುಗಳ ನಡುವೆ ಹಣೆಗೆ ಬಿತ್ತು. ಆ ಕ್ರೂರ ಪ್ರಾಣಿಯು ಸತ್ತಿತು. ಕುರುಬನು ನಿಧಾನವಾಗಿ ಮರದಿಂದ ಕೆಳಗೆ ಇಳಿದ 'ಲೆ ! ನೀನು ನನ್ನ ಮಾತು ಕೇಳಲಿಲ್ಲ ಅನ್ಯಾಯವಾಗಿ ಆ ಹುಲಿ ಕೊಂದೆ ಯಾಕೆ ಈ ರೀತಿ ಮಾಡ್ದೆ' ಎಂದು ಬೈದನು. 'ನಾನು ಹುಲಿಯನ್ನು ಕೊಲ್ಲದಿದ್ದರೆ ಅದು ನಮ್ಮನ್ನು ಕಚಕಚನೆ ತಿಂದು ಬಿಡುತ್ತಿತ್ತು, ಗೊತ್ತ ?'

ಕುರುಬನು ಹೇಳಿದನು 'ಏನು ಆಗುತ್ತಿರಲಿಲ್ಲ ನೀನು ಭಯ ಬಿದ್ದಿದ್ದೀಯ ? ಅಮ್ಮಮ್ಮ ಅಂದ್ರೆ ಒಂದು ಕುರಿ ಹುಲಿಯ ಪಾಲಾಗುತ್ತಿತ್ತು, ಅಷ್ಟೆ, ಸದ್ಯ, ನಮ್ಮ ಅದೃಷ್ಟ ಗುಂಡು ಹುಲಿಯ ತಲೆಗೆ ಬಿತ್ತು ಅದಕ್ಕೆ ನಾವು ಬದುಕಿದೆವು'.

ಸರ್ರನೆ ಕುರುಬನು ಬಂದೂಕವನ್ನು ಆ ಹುಡಗನಿಂದ ಕಿತ್ತುಕೊಂಡು, ಪುನಃ ಗುಂಡು ತುಂಬಿ ದನ ಕಾಯುವ ಹುಡುಗನ ಎದೆಗೆ ಹಿಡಿದು 'ಹುಲಿಯನ್ನು ಮನೆಗೆ ಸಾಗಿಸಲು ಒಂದು ದನ ಕೊಡು' ಅಂದನು.

'ನಾನಲ್ವ ಹುಲಿ ಕೊಂದಿದ್ದು ನಿಮ್ಮ ಮನೆಗೆ ಯಾಕೊ ಕೊಡ್ಲಿ ?'

'ನನ್ನ ಬಂದೂಕದಿಂದ ಕೊಂದಿರುವೆ' ದನ ಕೊಡದಿದ್ದರೆ ನಿನ್ನನ್ನು ಕೊಲ್ಲುತ್ತೇನೆ'.

(ಅನುವಾದ : ಕೇ ಬಿ.)

ಮೀಸಲಾತಿ ವಿರುದ್ಧ ಮೈಸೂರು ವಿ. ವಿ. ಸಮರ

ಮೈಸೂರು ವಿಶ್ವವಿದ್ಯಾನಿಲಯ ಸದ್ದುಗದ್ದಲವಿಲ್ಲದೆ ಗುಜರಾತನ್ನೂ ಮೀರಿಸಿ ದಲಿತರಿಗೆ ಸಿಕ್ಕುವ ಸವಲತ್ತುಗಳ ವಿರುದ್ಧ ಸಮರ ಪ್ರಾರಂಭಿಸಿದೆ ! ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಮೂಲಕ ತಮ್ಮ ವಿದ್ಯಾಭ್ಯಾಸ ಮುಂದುವರೆಸುವ ಹೆಬ್ಬಯಕೆಯಲ್ಲಿದ್ದ ಇಡೀ ಕರ್ನಾಟಕದ ಅಷ್ಟೇ ಏಕೆ ಇಡೀ ಇಂಡಿಯಾದ ದಲಿತ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಈ ಧೋರಣೆಗೆ ಬೆಚ್ಚಿ ಕುಳಿತ್ತಿದ್ದಾರೆ. ಯಾಕೆಂದರೆ "1981-82ನೇ ಸಾಲಿನಿಂದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಗೆ ಸೇರ ಬಯಸುವ ಹರಿಜನ/ಗಿರಿಜನ/ಹಿಂದುಳಿದ ಜಾತಿ ವಿದ್ಯಾರ್ಥಿಗಳು ಬೇರೆಯವರು ತೆರುವಷ್ಟೇ ಫೀಸು ತೆರಬೇಕು—ಇದು 1981ರ ಏಪ್ರಿಲ್ 10ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಪಾಸಾಗಿ ಈಗ ಜಾರಿಗೆ ಬಂದಿರುವ ನಿರ್ಣಯ ! ದಲಿತರ ಪರ ಗಂಟಲು ಹರಿಯುವಂತೆ ಮಾತಾಡುವ ಸರ್ಕಾರ ಇದನ್ನು ಸಮ್ಮತಿಸಿದೆಯೇ ? ತಿಳಿದುಬಂದಿಲ್ಲ !

ಮೀಸಲಾತಿ ವಿರೋಧಿಗಳ ಬಾಯಿ ಮುಚ್ಚಿಸಿ ಯಶಸ್ವಿಯಾದ ಕರ್ನಾಟಕದ ಎಚ್ಚೆತ್ತ ದಲಿತರು ಈ ಸವಾಲನ್ನು ಹೇಗೆ ಎದುರಿಸುತ್ತಾರೆ ಕಾದು ನೋಡಬೇಕು.



ಗಂಡಭೇರುಂಡ ಪಕ್ಷಿ ಕಥೆ

ಎಲ್ಲೋ ಎಂದೊ ಓದಿದ ಕತೆಯು ಗಂಡ ಭೇರುಂಡ ಪಕ್ಷಿಯು ನನ್ನ ತಲೆಯಲ್ಲಿ ಆಗಾಗ ಹಾರಾಡುತ್ತಿರುತ್ತದೆ. ಆ ಗಂಡಭೇರುಂಡ ಪಕ್ಷಿ ಹಾರುತ್ತ ವಿಹರಿಸಿಕೊಂಡು ಬಂದು ಒಂದು ನದೀ ದಡದಲ್ಲಿ ಕೂತು, ಅದರ ಒಂದು ತಲೆ ಒಂದು ಕಡೆ, ಇನ್ನೊಂದು ತಲೆ ಇನ್ನೊಂದು ಕಡೆ ನೋಡುತ್ತ ಆನಂದಿಸುತಿಹದು. ಅಷ್ಟರಲ್ಲಿ ಆ ಹರಿಯೋ ನದೀಲಿ ತೇಲುತ್ತ ಒಂದು ಫಲವು ಆ ಪಕ್ಷಿ ನೋಡಿಯೋ ಎಂಬಂತೆ ದಡದಲ್ಲಿ ಬಂದು ನಿಂತಿತು. ಇದ ಕಂಡ ಆ ಪಕ್ಷಿಯ ಒಂದು ತಲೆಯು ಇನ್ನೇನು ಆ ಫಲವನ್ನು ಕುಕ್ಕಿ ತಿನ್ನ ಬೇಕು ಅನ್ನುವಷ್ಟರಲ್ಲಿ, ಆ ಪಕ್ಷಿಯ ಇನ್ನೊಂದು ತಲೆ 'ನಿಲ್ಲಿಸು ತಿನ್ನಬೇಡ' ಎಂದಿತು. ತೊಗಟೆಗೆ ಕೊಕ್ಕು ಸಿಕ್ಕಿಸಿದ್ದ ತಲೆಯು ಸುರಿಯುವ ಜೊಲ್ಲು ಉಗತು 'ಯಾಕೆ ತಿನ್ನಬಾರದು?' ಎಂದು ಕಿಡಿ ಕಿಡಿಯಾಗಿ ಕೇಳಿತು. ಇನ್ನೊಂದು ತಲೆಯು ಇನ್ನಷ್ಟು ಕಿಡಿಯಾಗಿ

'ಯಾಕೆ ಅಂದರೆ? ನಾನೂ ತಿನ್ನಬಾರದೆ?'

'ಮೊದಲು ನೋಡಿದ್ದು ನಾನಲ್ಲವೆ?'

'ನಮ್ಮ ದೇಹ ಒಂದೇ ಅಲ್ಲವೆ?'

'ದೇಹ ಒಂದೇ ಆದರೂ ತಿನ್ನುವ ಬಾಯಿ ಬೇರೆ ಬೇರೆ ಅಲ್ಲವೆ?'—ಹೀಗೆ ವಾಗ್ವಾದ ನಡೆದು ಮೊದಲು ಹಣ್ಣು ಕಂಡ ತಲೆಯೇ ಪೂರ್ತ ಹಣ್ಣು ತಿಂದಿತು. ತಿನ್ನದ ತಲೆ ಕಣ್ಣು ಮುಚ್ಚಿಕೊಂಡು ಕಣ್ಣು ತೆರೆದರೆ ಕಂಡದ್ದೇನು? ಇನ್ನೊಂದು ಫಲವು ನದೀಲಿ ತೇಲಿಕೊಂಡು ಬರುತಲಿದೆ. ಮೊದಲ ಹಣ್ಣು ತಿನ್ನದಿದ್ದ ತಲೆಯು ಇನ್ನೇನು ತಿನ್ನಬೇಕು ಅನ್ನುವಷ್ಟರಲ್ಲಿ ಇನ್ನೊಂದು ತಲೆಯು ಗಾಬರಿ ಯಿಂದ 'ಅಯ್ಯೊಯ್ಯೊ ವಿಷದ ಫಲ ತಿನ್ನಬೇಡ ಎಂದಿತು. ಇದರಿಂದ ಮೊದಲ ತಲೆಗೆ ಸಂತೋಷ ವೇ ಆಗ 'ನನ್ನ ತಲೆ, ನಾನು ತಿಂತೇನೆ ನಿಂಗೇನು?' ಎಂದಾಗ, ಇನ್ನೊಂದು ತಲೆಯು 'ನೀನೇ ತಿಂದರೂ ನಮ್ಮ ದೇಹ ಒಂದೇ ಅಲ್ಲವೇ?' ಅಂದುದಕ್ಕೆ ಈ ತಲೆಯು 'ದೇಹ ಒಂದಾದರೂ ತಿನ್ನುವ ಬಾಯಿ ಬೇರೆ ಬೇರೆ ಅಲ್ಲವೆ? ಎಂದು ಆ ಹಣ್ಣನ್ನು ತಿಂದೇ ತಿಂದಿತು.

—ಹೀಗೆ ತಿಂದಾದ ಮೇಲೆ ಇಡೀ ದೇಹಕ್ಕೆ ಬೆಂಕಿ ಕೆಂಡವ ಸುರಿದಂತಾಗಿ ಆ ಉರಿಗೆ ದೇಹವಿಡೀ ವಿಲಿವಿಲಿ ಒದ್ದಾಡಿ ಮತ್ತು ಕೊನೆಯದಾಗಿ ಆ ಪಕ್ಷಿಯು ಸತ್ತಿತು.

ಪ್ರೀತಿಯ ಸ್ನೇಹಿತರೇ ಕೇಳಿ, ಅಸ್ಪೃಶ್ಯರಿಗೆ ದೇಹ ಒಂದೇ ಆದರೂ ತಲೆ ನೂರೆಂಟು—ಎಡಗೈ ಬಲಗೈ, ಎಡಗೈ ಹೆಬ್ಬೆರಳು ಕಿರುಬೆರಳು, ಬಲಗೈ ಹೆಬ್ಬೆರಳು ಕಿರುಬೆರಳು—ಹೀಗೆ ನೂರೆಂಟು. ನರಿ ನಾಯಿಗಳಂತಿರುವ ದಲಿತ ರಾಜಕಾರಣಿಗಳೊ ತಮ್ಮ ಉಳಿವಿಗಾಗಿ ಅಸ್ಪೃಶ್ಯರೊಳಗಿನ ಭಿನ್ನತೆ ಯನ್ನು ಹೆಚ್ಚಿಸುತ್ತಿರುವರು. ಆದರೆ ನೆನಪಿರಲಿ ಗಂಡಭೇರುಂಡ ಪಕ್ಷಿಯಂತೆ ಸಾಯುವವರು ಒಟ್ಟಿಗೆ ದೇಹವಾದ ನಾವೂ. ನಮ್ಮ ಸಾವಿಗೆ ಸ್ವಲ್ಪ ಕಾಲಾವಕಾಶವಿರುವಾಗಲೇ ಅಸ್ಪೃಶ್ಯ ಮತ್ತಿತರ ಸಣ್ಣ ಪುಟ್ಟ ಜಾತಿಗಳೊಳಗಿನ ಭಿನ್ನತೆ ಯನ್ನು ಮೊದಲು ಕಿತ್ತೆಸೆದರೆ ಮಾತ್ರ ನಮ್ಮ ಉಳಿವು. ಈಗ ಗಂಡಭೇರುಂಡ ಕತೆಯು ನಿಮ್ಮ ತಲೆಯೊಳಗೆ ಹಾರಾಡಲಿ.

ಬಾಯಿ ಮುಚ್ಚಿಕೊಳ್ಳಿರಿ

ಶಿವ ಶಿವಾ ದ್ವಿಜರೆಂಬ ಪಾತಕರು ನೀವು
ಕೇಳಿ ಭೋ !
ನೀವು ಎಲ್ಲ ಜಾತಿಗೂ ನಾವೇ ಮಿಗಿಲೆಂದು
ವರ್ಣನಾಂ ಬ್ರಾಹ್ಮಣೋ ಗುರುಃ' ಎಂದು
ಬಳ್ಳಿಟ್ಟು ಬಾಸ್ಕಳ ಗೆಡುವುತಿಪ್ಪಿರಿ ನೋಡಾ
'ಆದಿ ಬಂದು ಧ್ವವನೆ ಬೀಜಂ' ಎಂಬ
ಶ್ರುತಿಯಂ ತಿಳಿದು ನೋಡಲು
ಆದಿಯಲ್ಲಿ ನಿಮ್ಮ ಮಾತಾಪಿತರ ಕೀವುರಕ್ತದ
ಮಿಶ್ರದಿಂ
ನಿಮ್ಮ ಪಿಂಡ ಉದಯಿಸಿತು.
ಆ ಕೀವು ರಕ್ತಕೆ ಆವ ಕುಲ ಹೇಳಿರೆ ?
ನಾನು ಉತ್ತಮದ ಬ್ರಾಹ್ಮಣರೆಂಬ ನಿಮ್ಮ
ದೇಹ ಬ್ರಹ್ಮನೊ
ನಿಮ್ಮ ಪ್ರಾಣ ಬ್ರಹ್ಮನೊ ಆವುದೊ
ಬ್ರಾಹ್ಮಣ್ಯ?
ಬಲ್ಲಡೆ ಬಗುಳಿರೆ, ಅರಿಯದಿರ್ದಡೆ ಕೇಳಿರೆ.
ನಿಮ್ಮಿಂದ ಏಳು ಬೆಲೆ ಹೊರಗಾದ ಹೊಲೆಯನೆ
ಉತ್ತಮ
ಕುಲಜನೆಂದು ಮುಡಿಗೆಯ ಹಾಕಿದೆಯ,
ಎತ್ತಿರೋ ಸತ್ಯ ಉಳ್ಳಡೆ
ಅಲ್ಲದಡೆ ನಿಮ್ಮ ಬಾಯ ಮುಚ್ಚಿಕೊಳ್ಳಿ.

—ವೀರಶಂಕರದಾಸಯ್ಯ

ಅಸ್ಪೃಶ್ಯತೆ ಮಾಡಿದವಗೆ ಚಪ್ಪಲಿಯಲ್ಲಿ ಹೊಡೆಯಲು ನಿರ್ಧಾರ

ಪಿರಿಯಾ ಪಟ್ಟಣ : ಈ ತಾಲ್ಲೂಕಿನ ಬೆಟ್ಟದ ಪುರದ ಹಿರಿಯ ಪ್ರಾಥಮಿಕ ಪಾಠ ಶಾಲೆಗೆ ಹರಿ ಜನ ಪುಟ್ಟಮಾದಯ್ಯ ಮುಖ್ಯೋಪಧ್ಯಾಯರಾಗಿ ಬಂದುದು ಅದುವರೆಗೂ ಸರ್ವಾಧಿಕಾರ ನಡೆಸಿದ್ದ ಬ್ರಾಹ್ಮಣ ವೆಂಕಟೇಶಯ್ಯನಿಗೆ ಕಸಿವಿಸಿ ಉಂಟಾ ಗಿ ಇದುವರೆಗೂ ಆತ ಮಕ್ಕಳ ಸ್ಕಾಲರ್‌ಷಿಪ್ ಹಣ ತಿನ್ನುತಿದ್ದುದಕ್ಕೆ ಕಲ್ಲು ಬಿದ್ದು ಕುಪಿತನಾಗಿ ದ್ದಾನೆ. ಸ್ಕಾಲರ್ ಷಿಪ್ ಹಣವು 75 ಬಂದರೆ ಮಕ್ಕಳಿಗೆ 60 ನೀಡುತ್ತಿದ್ದ ಈತನ ಕುತಂತ್ರ ವನ್ನು ಮುಖ್ಯೋಪಧ್ಯಾಯರು ತಪ್ಪಿಸಿದ್ದಕ್ಕೆ ವೆಂಕಟೇಶಯ್ಯ ಹಾರಾಡಿ 'ನಿನ್ನ ಕೈಯಿಂದ ಕೊಡುತ್ತೀಯಾ ಹೊಲೆ ಸೂಳೆ ಮಗನೆ' ಮುಂತಾ ಗಿ ಬೈದುದಲ್ಲದೆ ರಸ್ತೆ ಮಧ್ಯದಲ್ಲಿಯೇ ಪುಟ್ಟ ಮಾದಯ್ಯನವರಿಗೆ ಹೊಡೆದ ಪ್ರಕರಣ ವರದಿ ಯಾಗಿದೆ. ಸಂಬಂಧಿಸಿದವರಿಗೆ ಅರ್ಜಿ ಕೊಟ್ಟರೂ ಅವರು ಕಣ್ಮುಚ್ಚಿ ಕುಳಿತಿರುವರು. ಹರಿಜನರಾದ ಕಾರಣಕ್ಕೆ ವಾಸಿಸಲು ಸ್ಥಳ ಸಿಗದೆ ಶಾಲೆಯಲ್ಲೇ ಮಲಗುವ ಪುಟ್ಟಮಾದಯ್ಯನವರಿಗೆ ಕಲ್ಲೊಡೆ ಸುವ ಹೀನ ಕೃತ್ಯವೂ ಈಹಾರುವನಿಂದ ನಡೆಯು ತ್ತಿದೆ. ಈ ಶಾಲೆಯ ವಾರ್ಷಿಕೋತ್ಸವ ಸಂದರ್ಭ ದಲ್ಲಿ ವಿದ್ಯಾಧಿಕಾರಿ ಸಮ್ಮುಖದಲ್ಲೇ ಮುಖ್ಯೋ ಪಧ್ಯಾಯರಿಗೆ ಕುರ್ಚಿ ಹಾಕಿಸಿ ಕೂರಿಸದಷ್ಟು ಹಾರುವರು ಅಸಂಸ್ಕೃತರಾಗಿದ್ದಾರೆ.

ಈ ಬಗ್ಗೆಲ್ಲ ಮೈಸೂರು ದಲಿತ ಸಂಘರ್ಷ ಸಮಿತಿಯು ಸಭೆ ಸೇರಿ ಚರ್ಚಿಸಿ, ಅಕ್ಷರಸ್ಥ ಹಾರುವ ಅನಾಗರೀಕ ಉಪಾಧ್ಯಾಯ ತನ್ನ ನಡತೆಯನ್ನು ಇನ್ನು ಮುಂದೆ ಸರಿಪಡಿಸಿಕೊಳ್ಳ ದಿದ್ದಲ್ಲಿ ಮೈಸೂರಿನಿಂದ ನೂರಾರು ಜನ ಜಾಥಾ ದಲ್ಲಿ ಬೆಟ್ಟದಪುರಕ್ಕೆ ಬಂದು ಸಾರ್ವಜನಿಕ ಸ್ಥಳ ದಲ್ಲಿ ವೆಂಕಟೇಶಯ್ಯನಿಗೆ ಚಪ್ಪಲಿಯಲ್ಲಿ ಹೊಡೆಯ ಬೇಕೆಂದು ನಿರ್ಣಯಿಸಿದ್ದಾರೆ.

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ ವಿನ್ಯಾಸ ಪ್ರಿಂಟರ್ಸ್, ಮೈಸೂರು-9 ಇಲ್ಲಿ ಮುದ್ರಿಸಲ್ಪಟ್ಟು ಎಚ್. ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : ಮಾಸ್ತಿಗುಡಿ, 2ನೇ ಕ್ರಾಸ್, ಅಶೋಕಪುರಂ, ಮೈಸೂರು-570009